Sri. D. DEVARAJ URS.—In my statement I have said that the Sub Inspector–whoever it is–, has failed in his duty and action will be taken. What more can I say ?

ಶ್ರೀ ಎಸ್. ಆರ್. ಬೊಮ್ಮಾಯಿ :—ಮಾನ್ಯ ಮುಖ್ಯಮಂತ್ರಿಗಳು ರಕ್ಷಣೆ ಬೇಕಾದರೆ ಕೊಡುತ್ತೇವೆಂದು ಹೇಳಿದರು. ಆದರೆ ನಾವು ರಕ್ಷಣೆ ಬೇಕೆಂದು ತಮ್ಮಲ್ಲಿ ಭಿಕ್ಷೆ ಬೇಡುವುದಿಲ್ಲ. ನಾವು ರಾಜಕೀಯದಲ್ಲಿದ್ದೇವೆ. ಆದಕಾರಣ ಗೂಂಡಾ ಜನರು 'ಏನಾದರು ನಮ್ಮ ಹತ್ತಿರ ಬಂದರೆ, ಅವರನ್ನು ಹೆದರಿಸುವುದಕ್ಕೆ ನಮಗೆ ಸಾಮರ್ಥ್ಯಇದೆ. ಆದರೆ ಇಂತಹ ಘಟನೆಗಳು ನಡೆದ ಮೇಲೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದಲ್ಲವೇ ಮಂತ್ರಿಗಳು ಇಲ್ಲವೇ ಅಧ್ಯಕ್ಷರ ಮನೆ ಮುಂದೆ ಇಂತಹ ಘಟನೆಗಳು ನಡೆದರೆ 'ಏನು ಕ್ರಮ ತೆಗೆದುಕೊಳ್ಳುತ್ತೀರೋ ಅಂತಹ ಕ್ರಮವನ್ನು ಈ ಪ್ರಕರಣದಲ್ಲಿಯೂ ತೆಗೆದುಕೊಳ್ಳುವುದು ಸರ್ಕಾರದ ಕರ್ತವ್ಯ ಕರ್ತವ್ಯ ಹೌದೋ ಅಥವಾ ಅಲ್ಲವೋ ಎಂದು ಕೇಳುತ್ತೇನೆ ? ರಕ್ಷಣೆಯನ್ನು ನಾವೇ ಕೇಳಿ ಪಡೆಯಬೇಕೆ ? ಇಂತಹ ಒಂದು ಪ್ರಕ್ಷುಬ್ಧ ವಾತವರಣವಿರುವಾಗ ಅವರ ಮನೆ ಮುಂದೆ ಪೋಲೀಸಿನವರು ಇರುವುದು ಒಳ್ಳೆಯದಲ್ಲವೇ ? Are they so much demoralized ? Whenever there is an incident even in respect of the Members of Parliament, the Police are sent. It is so even in respect of Ministers and Speakers. Here, I think they are afraid to send the Polic for their protection. ವಿರೋಧಪಕ್ಷದ ನಾಯಕರ ಮನೆ ಮುಂದೆ ಪೋಲೀಸಿನವರನ್ನು ಕಳುಹಿಸಿಕೊಡುವುದಕ್ಕೆ ಏನಾದರು ಅಂಜಿಕೆ ಇದೆಯೋ ಹೇಗೆ ?

ಶ್ರೀ ಡಿ. ದೇವರಾಜ ಅರಸ್ : ಅಲ್ಲಿಗೆ ಪೋಲಿಸಿನವರನ್ನು ಹಾಕಿದ್ದೇವೆ.

Budget Estimats for 1979-80 (General Discussion Debats continued)

†ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ : (ಮಾಯಕೊಂಡ) : ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಮಂಡಿಸಿರುವ ಆಯುವ್ಯಯ ಪತ್ರವನ್ನು ಬೆಂಬಲಿಸಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲು ಇಚ್ಛೆಪಡುತ್ತೇನೆ. ಮಾನ್ಯ ಅರ್ಥಸಚಿವರು ತಮ್ಮ ಭಾಷಣದಲ್ಲಿ ಬಡ್ಜೆಟ್ ತಯಾರಿಸುವುದು ಬಹಳ ಕಷ್ಟದಾಯಕವಾದ ಕೆಲಸ, ಅದರಲ್ಲೂ, ಎಲ್ಲ ವರ್ಗದವರಿಗೂ ಒಪ್ಪಿಕೊಳ್ಳುವಂತಹ ಬಡ್ಜೆಟ್ ತಯಾರಿಸುವುದು ಇನ್ನೂ ಕಷ್ಟದ ಕೆಲಸವೆಂದು ಹೇಳಿದ್ದಾರೆ. ಆದರೂ ಮಾನ್ಯ ಅರ್ಥಸಚಿವರನ್ನು ಮತ್ತು ನಮ್ಮ ಸರ್ಕಾರವನ್ನು ನಾವು ಈ ದಿವಸ ಅಭಿನಂದಿಸಬೇಕಾಗಿದೆ. 'ಏಕೆಂದರೆ, ಈ ಆಯುವ್ಯಯ ಪತ್ರ ಎಲ್ಲ ವರ್ಗದ ಜನರ ಮೆಚ್ಚುಗೆಯನ್ನು ಪಡೆದಿದೆ.

ಇನ್ನು ನಾನಾ ರೀತಿಯ ಕಿರುಕುಳಗಳಿಗೆ ಸಿಕ್ಕಿದಂಥ ನಮ್ಮ ವ್ಯಾಪಾರಿ ಜನರು ಅವರು ದೊಡ್ಡವರೇ ಇರಬಹುದು, ಚಿಕ್ಕವರೇ ಇರಬಹುದು, ಇವರಿಗೆಲ್ಲಾ ಅನುಕೂಲವಾಗುವಂತೆ ಆಕ್ಟ್ರಾಯನ್ನು ಸಂಪೂರ್ಣವಾಗಿ ನಮ್ಮ ಸರ್ಕಾರ ರದ್ದು ಮಾಡಿದ್ದರಿಂದ, ಈ ಜನರೂ ಸಹ ಮಾನ್ಯ ಅರ್ಥ ಸಚಿವರಿಗೆ ತಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದಾರೆ. ವ್ಯಾಪಾರಸ್ಥರು, ಬಡವರು, ಹಿಂದುಳಿದ ವರ್ಗದವರು ಮೊದಲ್ಗೊಂಡು ಎಲ್ಲರೂ ಈ ಒಂದು ಬಡ್ಜೆಟ್‌ನ್ನು ಸ್ವಾಗತಮಾಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಇಡೀ ದೇಶದಲ್ಲಿಯೇ ಮೊದಲನೆಯದಾಗಿ ಈ ಆಕ್ಟ್ರಾಯನ್ನು ರದ್ದು ಮಾಡುವಂತಹ ಒಂದು ದಿಟ್ಟತನದ ಹೆಜ್ಜೆಯನ್ನು ಇಟ್ಟಂತಹ ನಮ್ಮ ಸರ್ಕಾರವನ್ನು ನಾನೂ ಸಹ ಅಭಿನಂದಿಸುತ್ತೇನೆ. ಆದರೆ ಇದರ ಹಿನ್ನೆಲೆಯಲ್ಲಿ ನಾನಾ ರೀತಿಯ ಸಮಸ್ಯೆಗಳು ಉದ್ಭವವಾಗುತ್ತವೆ. ಇನ್ನು ಮುಂದೆ ಈ ಆಕ್ಟ್ರಾಯ್ ರದ್ದಿನಿಂದ ನಮ್ಮ ಮುನಿಸಿಪಾಲಿಟಿಗಳು ಹಾಗೂ ಕಾರ್ಪೊರೇಷನ್‌ಗಳು ಪೆನ್‌ಷನ್‌ದಾರರ ತರಹ ಸ್ವಲ್ಪ ಹಣ ಸ್ವೀಕಾರ ಮಾಡಿ ತಮ್ಮ ಕೆಲಸಗಳನ್ನು ಸೀಮಿತಗೊಳಿಸುವಂತಹ ಅವಕಾಶ ಬರಬಹುದೇಬ ಶಂಕೆ ನನಗಿದೆ. ಈ ಒಂದು ವಿಷಯವನ್ನು ನಮ್ಮ ಸರ್ಕಾರ ಸರಿಯಾಗಿ ಎದುರಿಸಬೇಕು ; ನಮ್ಮ ಮುನಿಸಿಪಾಲಿಟಿಗಳು ಹಾಗೂ ಕಾರ್ಪೊರೇಷನ್‌ಗಳಿಗೆ ಸಾಕಷ್ಟು ಹಣವನ್ನು ಸರ್ಕಾರದವರು ಒದಗಿಸಿ, ಅವರ ಅಭಿವೃದ್ಧಿ ಕಾರ್ಯಗಳಿಗೆ ಯಾವ ಅಡೆತಡೆಗಳೂ ಬರದಂತೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಆಕ್ಟ್ರಾಯ್ ಕೆಲಸ ಮಾಡುತ್ತಿದ್ದ ನೌಕರರು ಏನಿದ್ದರು, ಆ ನೌಕರರಿಗೂ ಮಾನ್ಯ ಸಚಿವರು ಭರವಸೆ ಕೊಟ್ಟಿದ್ದಾರೆ. ಇವರ ಬಗ್ಗೆ ಬೇಗ ತೀರ್ಮಾನ ಕೈಕೊಂಡು ಮುಂದೆ ಆ ನೌಕರರಿಗೆ ಯಾವ ರೀತಿಯಿಂದಲೂ ತೊಂದರೆಯಾಗದಂತೆ ಕ್ರಮ ಕೈಕೊಳ್ಳುತ್ತಾರೆಂದು ನಾನು ನಂಬಿರುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಆಹಾರದ ಪರಿಸ್ಥಿತಿ ಬಹಳ ಸಮಾಧಾನಕರವಾಗಿದೆ ಎಂದು ಹೇಳಿದ್ದಾರೆ. ರೈತರ ಹಿತದೃಷ್ಟಿಯಿಂದ ಅವರು ಬೆಳೆಯುವಂಥ ಭತ್ತ, ರಾಗಿ, ಜೋಳ ಮುಂತಾದ ಬೆಳೆಗಳಿಗೆ ಸಪೋರ್ಟ್ ಪ್ರೈಸ್ ಕೊಡುವಂತಹ ಒಂದು ತೀರ್ಮಾನವನ್ನು ನಮ್ಮ ಸರ್ಕಾರ ಕೈಕೊಂಡು ಇವೊತ್ತು ರೈತರಿಗೆ ಬಹಳ ಸಹಾಯ ಮಾಡಿದೆ. ಆದರೆ ಈ ಸಪೋರ್ಟ್ ಪ್ರೈಸ್ ರೈತರಿಗೆ ಎಷ್ಟರಮಟ್ಟಿಗೆ ಸಹಾಯವಾಗಿದೆ ಎನ್ನುವುದನ್ನು ನಾವು ಇವೊತ್ತಿನ ದಿವಸ ತೀರ್ಮಾನ ಮಾಡಬೇಕಾಗಿದೆ. ರೈತರು ಉಪಯೋಗ ಮಾಡುವಂತಹ ಗೊಬ್ಬರ, ಬೀಜ ಹಾಗೂ ಅವರು ಕೊಡುವಂತಹ ಕೂಲಿಯನ್ನು ಲೆಕ್ಕಾಚಾರ ಮಾಡಿ ಸರ್ಕಾರದವರು ಈ ಸಪೋರ್ಟ್ ಪ್ರೈಸನ್ನು ನಿಗದಿ ಮಾಡುತ್ತಾರೆ. ಆದರೆ ರೈತರು ತಮ್ಮ ಮನೆಯಲ್ಲಿ ದಿನ ನಿತ್ಯವೂ ಉಪಯೋಗ ಮಾಡುವಂತಹ ಸೌದೆ, ಸೀಮೆಎಣ್ಣೆ, ಎಣ್ಣೆ ಮುಂತಾದ ನಾನಾ ದಿನಬಳಕೆಯ ಪದಾರ್ಥಗಳ ಬೆಲೆಗಳು ಗಗನಕ್ಕೇರಿದೆ. ಈ ಕಾರಣದಿಂದ ಸರ್ಕಾರದವರು ಈಗ ನಿಗದಿ ಮಾಡಿರುವ ಸಪೋರ್ಟ್ ಪ್ರೈಸ್‌ನಿಂದ ರೈತರ ಪರಿಸ್ಥಿತಿ ಸುಧಾರಿಸುವುದಕ್ಕೆ ಸಾಧ್ಯವಿದೆಯೇ ಎಂಬ ಮಾತನ್ನು ಎಲ್ಲರೂ ಕೇಳುತ್ತಿದ್ದಾರೆ. ಬೆಲೆಗಳು ಗಗನಕ್ಕೆ ಏರುತ್ತಿರುವ ಕಾರಣದಿಂದ ಸರ್ಕಾರೀ ನೌಕರರಿಗೆ ಪ್ರತಿ ವರ್ಷವೂ ಸಂಬಳ ಹೆಚ್ಚು ಮಾಡಲಾಗುತ್ತದೆ. ಇದಕ್ಕಾಗಿ ಸರ್ಕಾರದವರು ಪ್ರತಿ ವರ್ಷವೂ ಕೋಟ್ಯಾಂತರ ರೂಪಾಯಿಗಳನ್ನು ಮಂಜೂರು ಮಾಡಿಕೊಂಡು ಬಂದಿದ್ದಾರೆ. ಆದರೆ ರೈತರು ತಮಗೆ ಬೇಕಾದ ಅಗತ್ಯ ವಸ್ತುಗಳನ್ನು ಕೊಳ್ಳುವುದಕ್ಕೆ ಯಾವ ರೀತಿಯ ಸಹಾಯವನ್ನೂ ಸರ್ಕಾರದವರು ಮಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಭಾಷಣಮಾಡುವಾಗ ಒಂದು ವಿಷಯವನ್ನು ಹೇಳಿದ್ದಾರೆ. ಅದನ್ನು ಈಗ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ :—

"The prices which the farmers have to pay for their inputs are rising continuosuly ; but the prices they get for their products are falling. This has hit the farmers very seriously. Under such a situation, inputs like credit, fertilisers, agricultural implements and other essential requirements of the small and marginal farmers should be given at substantially subsidised rates." ಎಂದು ಹೇಳಿದ್ದಾರೆ. ಈ ರೀತಿಯ ಒಂದು ಕಾರ್ಯಕ್ರಮವನ್ನು ಕೈಕೊಂಡು ರೈತರಿಗೆ ಸಹಾಯ ಮಾಡುವುದಕ್ಕೆ ನಮ್ಮ ಸರ್ಕಾರವು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಸರ್ಕಾರ ಹಿಂದೆಂದೂ ಆಗದ ರೀತಿಯಲ್ಲಿ ಹಿಂದುಳಿದ ವರ್ಗದವರಿಗೆ ಹಾಗೂ ಪರಿಶಿಷ್ಟ ಜನಾಂಗದವರಿಗೆ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಅದರಂತೆ ಮುನ್ನಡೆಯುತ್ತಿದೆ. ಅದಕ್ಕಾಗಿ ನಾನು ಕರ್ನಾಟಕ ಸರ್ಕಾರವನ್ನು ಅಭಿನಂದಿಸುತ್ತೇನೆ. ಆದರೆ ಈ ಜನರಿಗಾಗಿ ಹಾಕಿಕೊಂಡ ಕಾರ್ಯಕ್ರಮವೆಲ್ಲವೂ ಹೆಚ್ಚು ಫಲಕಾರಿಯಾಗುತ್ತಿಲ್ಲ. ಇದಕ್ಕೆ ಮುಖ್ಯವಾದ ಕಾರಣ ಕಾಡಿತ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರ ತನ್ನ ಒಂದು ಕೈಯಿಂದ ಬಹಳ ಧಾರಾಳವಾಗಿ ಈ ಬಡ ಜನರ ಅಭಿವೃದ್ಧಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ, ಮತ್ತೊಂದು ಕೈಯಿಂದ ಈ ಬಡವರಿಂದಲೇ ಎಕ್ಸೈಜ್ ಮೂಲದಿಂದಲೇ ಕೋಟ್ಯಾಂತರ ರೂ.ಗಳನ್ನು ತೆಗೆದುಕೊಳ್ಳುತ್ತಿದೆ. ಇದೇ ವಿಚಾರದಲ್ಲಿ ಮೊನ್ನೆ ದಿವಸ ಪ್ರಧಾನಮಂತ್ರಿಗಳು ತಮ್ಮ ಒಂದು ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. 'ಏನೆಂದರೆ, ಒಂದು ರೂಪಾಯಿಯನ್ನು ಎಕ್ಸೈಜ್‌ನಿಂದ ನಮ್ಮ ಸರ್ಕಾರ ಸ್ವೀಕರಿಸುವುದಾದರೆ ಬಡವ ಅದಕ್ಕಾಗಿ ೫ ರೂಪಾಯಿಗಳನ್ನು ಖರ್ಚು ಮಾಡುತ್ತಾನೆ ಎಂದು. ಸರ್ಕಾರದವರು ನೌಕರರಿಗೆ ಸಂಬಳವನ್ನು ಹೆಚ್ಚು ಮಾಡುತ್ತಾರೆ. ಆಹಾರದ ಧಾನ್ಯಗಳ ಬೆಲೆಗಳನ್ನು ಇಳಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ, ಮನೆಗಳನ್ನು ಕಟ್ಟಿಸಿಕೊಡುತ್ತಾರೆ, ಬಡವರ ಮಕ್ಕಳಿಗಾಗಿ ಹಾಸ್ಟೆಲ್‌ಗಳನ್ನು ತೆರೆದು ಅಲ್ಲಿ ವಿದ್ಯಾರ್ಥಿ ವೇತನ ಮುಂತಾದ ನಾನಾ ಅನುಕೂಲಗಳನ್ನು ಕಲ್ಪಿಸಿಕೊಟ್ಟರೂ ಸಹ ಕೊನೆಗೆ ಈ ಬಡಜನರ ಹೆಂಡತಿ ಮತ್ತು ಮಕ್ಕಳಿಗೆ ತಲುಪುವುದೆಂದರೆ ಗಂಜಿ ಮತ್ತು ಅರಕು ಬಟ್ಟೆ ಮಾತ್ರ ; ಮೊನ್ನೆಯ ದಿವಸ ನಾನು ವಿಧಾನಸೌಧದಲ್ಲಿ ಒಬ್ಬ ಜವಾನನಾಗಿರತಕ್ಕಂತಹವನ

ಹೆಂಡತಿಯನ್ನು ಮಾತನಾಡಿಸಿದೆ. ನಾವು ನಿಮ್ಮ ಯಜಮಾನರಿಗೆ ಪ್ರತಿವರ್ಷವೂ ಜಾಸ್ತಿ ಹಣವನ್ನು ಸಂಬಳದ ರೂಪದಲ್ಲಿ ಕೊಡುತ್ತಿದ್ದೇವೆ. ಏನಾದರೂ ನಿಮ್ಮ ಜೀವನದ ಮಟ್ಟ ಸುಧಾರಿಸಿದೆಯೆ ಎಂದು ಕೇಳಿದೆ. ಅದಕ್ಕವಳು ನೀವು ಅವರಿಗೆ ಜಾಸ್ತಿ ಸಂಬಳವನ್ನು ಕೊಟ್ಟಿರಿ. ಆದರೆ ಅವರು ಪ್ರತಿದಿನವೂ ಮನೆಗೆ ಬರುವಾಗ ಇನ್ನೂ ಹೆಚ್ಚು ಕುಡಿದು ಬರುತ್ತಾರೆ. ಇದರಿಂದ ಮನೆಗೆ ಯಾವರೀತಿಯ ಪ್ರಯೋಜನವೂ ಆಗಿಲ್ಲ ಎಂದು ಹೇಳಿದಳು. ಈ ರೀತಿ ಒಂದು ಕೈಯಿಂದ ಕೊಟ್ಟು ಇನ್ನೊಂದು ಕೈಯಿಂದ ಕಿತ್ತುಕೊಳ್ಳುವುದು ಬೇಡ. ನೀವು ಒಂದು ಪೆನ್ ಸ್ಟ್ರೋಕ್ ಹಾಕಿ ಆಕ್ಟ್ರಾಯನ್ನು ರದ್ದು ಮಾಡಿದ್ದೀರಿ. ಅದೇ ರೀತಿ ಹೆಂಡವನ್ನು ಕುಡಿಯುವುದನ್ನು ತಪ್ಪಿಸಿ ನಿಜವಾಗಿಯೂ ಸರ್ಕಾರದವರು ಉತ್ತಮ ಕಾರ್ಯವನ್ನು ಮಾಡಿ ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಪಾನನಿರೋಧವನ್ನು ಆದಷ್ಟು ಬೇಗ ಜಾರಿಗೆತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೊಳಚೆ ನಿರ್ಮೂಲನದ ಬಗ್ಗೆ ಒಂದು ಬೋರ್ಡನ್ನು ಸ್ಥಾಪನೆ ಮಾಡಲಾಗಿದೆ. ಆದರೆ ಇವತ್ತು ಇವರು ಒಂದು ಸ್ಲಂಕ್ಲಿಯರೆನ್ಸ್ ಮಾಡಿದರೆ ಹತ್ತು ಸ್ಲಂಗಳು ಹುಟ್ಟಿಕೊಳ್ಳುತ್ತಿವೆ. ಇವರ ಬಗ್ಗೆ some legislation has to be brought to prevent further creation of slums ಎನ್ನುವ ವಿಷಯವನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಸ್ಲಂಗಳ ಕ್ಲಿಯರೆನ್ಸ್ ಬಗ್ಗೆ ಮಹಾರಾಷ್ಟ್ರ ಸರ್ಕಾರದವರು ಒಂದು ಕಾನೂನನ್ನು ತಂದು ಫುಟ್‌ಪಾತ್‌ಗಳಲ್ಲಿ ಮಲಗತಕ್ಕ ಜನರಿಗೆ ನೈಟ್ ಶೆಲ್ಟರ್ಸ್ ವ್ಯವಸ್ಥೆ ಮಾಡಿ ಅವರಿಗೆ ರಾತ್ರಿ ಹೊತ್ತು ಮಲಗಲು ಅನುಕೂಲ ಮಾಡಿರುವುದರಿಂದ ಅಲ್ಲಿ ಸ್ಲಂಗಳು ಬೆಳೆಯುವುದನ್ನು ತಡೆಗಟ್ಟಿದ್ದಾರೆ ಎಂಬುದು ಗೊತ್ತಾಗುತ್ತದೆ. ಈ ಒಂದು ಕಾರ್ಯಕ್ರಮದಿಂದ ನಮ್ಮ ರಾಜ್ಯದಲ್ಲಿಯೂ ಕೊಳಚೆ ಪ್ರದೇಶಗಳು ನಿರ್ಮಾಣ ಆಗದಹಾಗೆ ನೋಡಿಕೊಳ್ಳಲು ನಮ್ಮ ಸರ್ಕಾರದವರು ನೈಟ್ ಶೆಲ್ಟರ್‌ಗಳನ್ನು ಕಟ್ಟಿಸಿದಲ್ಲಿ ಕೊಳಚೆ ಪ್ರದೇಶಗಳನ್ನು ಆದಷ್ಟು ತಡೆಗಟ್ಟಿದಂತಾಗುತ್ತದೆ.

ಇನ್ನು ನಮ್ಮ ಎಲ್ಲಾ ಸಮಸ್ಯೆಗಳಿಗೂ ಮೂಲ ಸಮಸ್ಯೆಯಾಗಿರುವುದು ಯಾವುದೆಂದರೆ ಅದು ಜನಸಂಖ್ಯಾ ಸ್ಫೋಟನೆ. ಇದನ್ನು ತಡೆಗಟ್ಟುವುದಕ್ಕೆ ನಾವು ಆದ್ಯ ಗಮನ ಕೊಡಬೇಕು. ಇದರ ಬಗ್ಗೆ ಕೇಂದ್ರ ಸರ್ಕಾರದವರ ನಿಲುವು ಏನೇ ಇದ್ದರೂ ನಮ್ಮ ರಾಜ್ಯದಲ್ಲಿನ ಹೆಚ್ಚು ಭಾಗದಲ್ಲಿ ಈ ಒಂದು ಸಮಸ್ಯೆಯನ್ನು ಎದುರಿಸಬೇಕಾಗಿದೆ. ಅಲ್ಲದೆ ನಾವು ಎಷ್ಟೇ ಆಹಾರಧಾನ್ಯಗಳನ್ನು ಬೆಳೆದರೂ ಅಂದರೆ ಹತ್ತರಷ್ಟು, ನೂರರಷ್ಟು ಆಹಾರವನ್ನು ಬೆಳೆದರೂ ಅದನ್ನು ತಿನ್ನತಕ್ಕಂತಹ ಬಾಯಿಗಳೂ ಸಹಾ ಹತ್ತರಷ್ಟಲ್ಲ ನೂರರಷ್ಟು ಜಾಸ್ತಿಯಾಗುತ್ತಿದೆ. ಇದರಿಂದ ಇವರಿಗೆಲ್ಲಾ ಕೆಲಸವನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತಿದೆ. ಎಲ್ಲಾ ಕ್ಷೇತ್ರಗಳಲ್ಲೂ ಸಹಾ ನಾವು ಉತ್ಪನ್ನ ಮಾಡಿದರೂ ಬಡತನ ಬಡತನ ಈದಿವಸ ಇಮ್ಮಡಿಯಾಗುತ್ತಿವೆ. ಇದಕ್ಕೆಲ್ಲಾ ಒಂದೇ ಒಂದು ಉಪಾಯವೆಂದರೆ ಅದು ಕುಟುಂಬ ಯೋಜನೆ. ಈ ಒಂದು ಕುಟುಂಬ ಯೋಜನೆ ಕಾರ್ಯಕ್ರಮವನ್ನು ನಮ್ಮ ರಾಜ್ಯದಲ್ಲಿ ಹೆಚ್ಚಿನ ರೀತಿಯಲ್ಲಿ ಜಾರಿಗೆತರಬೇಕೆಂದು ನಾನು ಹೇಳುತ್ತೇನೆ. ಈ ವರ್ಷ ನಾವು ಅಂತರರಾಷ್ಟ್ರೀಯ ಮಕ್ಕಳ ವರ್ಷವನ್ನು ನಾವು ಆಚರಿಸುತ್ತಿದ್ದೇವೆ. ಈ ಮಕ್ಕಳ ವರ್ಷವನ್ನು ಆಚರಿಸುತ್ತಿರುವುದು ಬರೀ ಸಿಟಿಗಳಲ್ಲಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಆದರೆ ಸಾಲದು ಇದರ ಒಂದು ಮಹತ್ವವನ್ನು ಪ್ರತಿಯೊಂದು ಹಳ್ಳಿಯಲ್ಲಿ, ಪ್ರತಿಯೊಂದು ತಾಲ್ಲೂಕು ಜನ ತಿಳಿದುಕೊಳ್ಳುವುದಕ್ಕಾಗಿ ರೇಡಿಯೋ ಮುಖಾಂತರ, ಸಿನಿಮಾ ಮುಖಾಂತರ ಸ್ಲೈಡ್ಸ್ ಹಾಗೂ ಪೋಸ್ಟರ್ಸ್ ಮುಖಾಂತರ ಪ್ರಕಟಪಡಿಸಬೇಕು. ಇದರಿಂದ ಪ್ರತಿಯೊಬ್ಬ ಪ್ರಜೆಯೂ ಅಂತರರಾಷ್ಟ್ರೀಯ ಮಕ್ಕಳ ವಿಷಯದ ಮಹತ್ವವನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಹಿಂದಿನ an order has been sent to Taluka Boards and Municipalities by the Directorate of Women and Children Welfare to the effect that 10% of their budget should be set-apart for the welfare of women and children. But that is optional and not compulsory.

ಹರಿಜನಗಿರಿಜನರ ಉದ್ಧಾರಕ್ಕಾಗಿ ಹೇಗೆ 18 ಪರ್ಸೆಂಟ್ ಮೀಸಲಾತಿಯನ್ನು ಜಾರಿಗೆತಂದು ಖಡ್ಡಾಯವಾಗಿ ಇಟ್ಟಿದ್ದೀರೋ ಅದೇ ರೀತಿ 10 ಪರ್ಸೆಂಟ್ ಖಡ್ಡಾಯವಾಗಿ ಮಹಿಳಾ ಮತ್ತು ಮಕ್ಕಳ ಲಾಭಕ್ಕಾಗಿ ನಮ್ಮ ಆರ್ಥಿಕ ಸಚಿವರು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಹಾಗೂ ಈ ಲಾಟರಿ ಯೋಜನೆ [illegible] ಒಂದು [illegible] ದಿನಗಳಲ್ಲಿ [illegible] ಆಗುತ್ತಿದೆ ಎನ್ನುವ ವಿಷಯವನ್ನು [illegible]ದ್ದೇನೆ. ಇದೇ ರೀತಿ ಹಿಂದೆ [illegible]ವರು

ಲಾಟರಿ ಯೋಜನೆಯ ಟಿಕೆಟ್‌ಗಳ ಮಾರಾಟ ಕಡಿಮೆಯಾದಾಗ ಲಾಟರಿಯಿಂದ ಬರತಕ್ಕಂತಹ ಹಣವನ್ನು ಅಂಗವಿಕಲರ ಪುರೋಭಿವೃದ್ಧಿಗಾಗಿ ಖರ್ಚುಮಾಡುತ್ತೇವೆಂದು ಪ್ರಕಟಣೆಯನ್ನು ಹೊರಡಿಸಿದರು. ಆಗ ಲಾಟರಿ ಟಿಕೆಟ್‌ಗಳ ಮಾರಾಟ ಮೊದಲಿಗಿಂತ ಮೂರರಷ್ಟು, ನಾಲ್ಕರಷ್ಟು ಹೆಚ್ಚಾಯಿತೆಂದು ತಿಳಿದಿದ್ದೇನೆ. ಇದೇ ರೀತಿ ನೀವೂ ಈ ಅಂತರರಾಷ್ಟ್ರೀಯ ಮಕ್ಕಳ ವರ್ಷದಲ್ಲಿ ಲಾಟರಿ ಸೇಲ್ಸ್ ಹಣದಿಂದ ಬರುವುದನ್ನು ಮಕ್ಕಳ ಅಭಿವೃದ್ಧಿಗೆ ಮೀಸಲಿಸುತ್ತೇವೆಂದು ಒಂದು ಪ್ರಕಟಣೆಯನ್ನು ಮಾಡಿ. ಇದರಿಂದ ಲಾಟರಿ ಯೋಜನೆಯಿಂದ ಹೆಚ್ಚಿನ ಹಣ ಬರುವುದಲ್ಲದೆ ಇದರಿಂದ ತಾವು ಹೆಚ್ಚಿನ ಸಹಾಯವನ್ನು ಮಕ್ಕಳ ಕಲ್ಯಾಣ ಯೋಜನೆಗೆ ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏನು ನಮ್ಮ ಮೋಟೋ ಇದೆ happy child is the Nations Pride ಆ ವಾಕ್ಯವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಹೆಚ್ಚಿನ ಆದ್ಯತೆ ಕೊಡುವುದಲ್ಲದೇ, ಹೆಚ್ಚಿನ ಕಾರ್ಯಕ್ರಮಗಳನ್ನು ಮಕ್ಕಳ ಕಲ್ಯಾಣಕ್ಕಾಗಿ ಹಾಕಿಕೊಳ್ಳಬೇಕೆಂದು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

Chairman (Sri H.T. Krishnappa) in the chair

†ಶ್ರೀ ಬಿ. ಬಿ. ಪಾಟೀಲ್ (ಆಳಂದ).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಏನು ಬಜೆಟ್ಟನ್ನು ಮಂಡಿಸಿದ್ದಾರೆ ಅದು ಸಮಾಧಾನಕರವಾಗಿಲ್ಲವೆಂದು ಹೇಳಬಯಸುತ್ತೇನೆ. ಕೃಷಿ ಪ್ರದೇಶ ಹೆಚ್ಚು ಇರತಕ್ಕಂಥ ನಮ್ಮ ದೇಶದಲ್ಲಿ ಒಕ್ಕಲುತನಕ್ಕಾಗಿ ಎಷ್ಟು ಹಣವನ್ನು ಇಡಬೇಕಾಗಿತ್ತೋ ಅಷ್ಟನ್ನು ಇಟ್ಟಿಲ್ಲವೆಂದು ನಾನು ನೊಂದ ಮನಸ್ಸಿನಿಂದ ಹೇಳುತ್ತೇನೆ. ಈ ಬಜೆಟ್ಟಿನಲ್ಲಿ ಒಕ್ಕಲುತನಕ್ಕೆ ಒಕ್ಕಲಿಗರ ಸಂಘಗಳಿಗೆ ಯಾವ ರೀತಿ ಸಹಾಯ ಸವಲತ್ತುಗಳನ್ನು ಕೊಡಬೇಕೆಂಬುದನ್ನೂ ಸಹಾ ಹೇಳಿಲ್ಲವೆಂದು ನಾನು ಹೇಳುತ್ತೇನೆ. ಶೇಕಡಾ ೭೫ ಕೃಷಿಪ್ರಧಾನವಾಗಿರತಕ್ಕಂತಹ ನಮ್ಮ ದೇಶದಲ್ಲಿ ಕೃಷಿಗೆ ಸಂಬಂಧಪಟ್ಟ ಬಜೆಟ್ ಮಾಡುವಾಗ, ಕೃಷಿಗೆ ಸಾಕಷ್ಟು ಹಣವನ್ನು ಒದಗಿಸಿಲ್ಲ. ಕೃಷಿ ಡೆವಲಪ್‌ಮೆಂಟ್ ಮಾಡುವಾಗ ಅಂದರೆ ಗ್ರೀನ್ ರೆವಲ್ಯೂಷನ್, ವೈಟ್ ರೆವಲ್ಯೂಷನ್ ಮಾಡುವಾಗ ಜನರ ಒಂದು ಸಹಕಾರವನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಹೇಳುತ್ತೇನೆ. ಅಂಥಾ ಪ್ರೋಗ್ರಾಮ್ ಯಾವುದೂ ಇದರಲ್ಲಿ ಇಲ್ಲ ಎಂದು ಬಹಳ ಖೇದದಿಂದ ಹೇಳುತ್ತೇನೆ. ಇದು ಸ್ವಾಭಾವಿಕವಾದ ವಿಚಾರ. ಹೋದ ಆಗಸ್ಟ್, ಸೆಪ್ಟೆಂಬರ್ ೧೯೭೭ರಲ್ಲಿ ನಾನು ಕೃಷಿಕರ ಪ್ರತಿನಿಧಿಯಾಗಿ ಅಮೇರಿಕಾಕ್ಕೆ ಹೋಗತಕ್ಕಂಥ ಒಂದು ಸದವಕಾಶ ದೊರಕಿತ್ತು. ಅಮೇರಿಕಾ ದೇಶದಲ್ಲಿ ಕೃಷಿಗಾಗಿ ಅಲ್ಲಿನ ಸರ್ಕಾರ ಪೂರ್ಣ ಸವಲತ್ತುಗಳನ್ನು ಒದಗಿಸಿದೆ. ಹೀಗಾಗಿ ಆ ಅಮೇರಿಕಾ ದೇಶದಲ್ಲಿ ಕೇವಲ ೫ ಪರ್ಸೆಂಟ್ ಕೃಷಿಕರು ಇದ್ದರೂ ಆ ದೇಶದ ರೈತರು ಇಡೀ ಪ್ರಪಂಚಕ್ಕೆ ಆಹಾರಧಾನ್ಯಗಳನ್ನು ಒದಗಿಸುತ್ತಿದ್ದಾರೆ. ಇವತ್ತು ಆ ದೇಶದಲ್ಲಿ ಸರ್ಕಾರದವರು ಹಾಗೂ ಬ್ಯಾಂಕ್‌ಗಳವರು ಮುಂದೆ ಬಂದು ಅಲ್ಲಿನ ರೈತರಿಗೆ ಹೆಚ್ಚಿನ ಸಹಾಯ ಸವಲತ್ತುಗಳನ್ನು ಒದಗಿಸುತ್ತಿದ್ದಾರೆ. ಅಲ್ಲಿನ ಒಂದು ಉದಾಹರಣೆಯನ್ನು ಹೇಳುತ್ತೇನೆ. ಅಲ್ಲಿನ ವೀಟ್ ಕಮಿಷನ್ ಏನಿದೆ ಅದು ತಮ್ಮ ರೈತರ ಉದ್ಧಾರಕ್ಕಾಗಿ ಮುಂದೆ ಬಂದಿದ್ದಾರೆ. ಇದರಿಂದ ಅಲ್ಲಿನ ರೈತರು ಸಾಕಷ್ಟು ಬೆಳೆದು ಇತರ ದೇಶಗಳಲ್ಲಿ ಆಹಾರವನ್ನು ಸರಬರಾಜು ಮಾಡುತ್ತಿದ್ದಾರೆ ಇವರುಗಳ ಸಹಾಯದಿಂದ ಅಲ್ಲಿನ ರೈತರು ಮುಂದೆ ಬಂದಿದ್ದಾರೆ ಇವತ್ತು ನಮ್ಮ ದೇಶದ ರೈನ್‌ಫಾಲ್ ಅಂಕಿಅಂಶ ಅವರ ಹತ್ತಿರ ಇದೆ. ಬೇಕಾದರೆ ಹೋಗಿ ನೋಡಬಹುದು. ಹೀಗೆ ಅವರು ಅಲ್ಲಿನ ರೈತರಿಗೆ ಪ್ರಪಂಚದ ರೈನ್‌ಫಾಲ್ ಅನ್ನು ಒದಗಿಸುತ್ತಾರೆ. ಈ ರೀತಿಯಾದ ಯಾವ ವ್ಯವಸ್ಥೆಯೂ ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಇಲ್ಲ. ರೈತರ ಬಗ್ಗೆ ನಮ್ಮ ಜನರಲ್ಲಿ ಆಸಕ್ತಿ ಇಲ್ಲ ಮತ್ತು ಸರ್ಕಾರಕ್ಕೂ ಹಾಗದ ರೈತರಿಗೂ ಕೋಆರ್ಡಿನೇಷನ್ ಇಲ್ಲ ಎಂದು ಗಂಟಾಘೋಷವಾಗಿ ಹೇಳುತ್ತಿದ್ದೇನೆ. ನಾನು ಅಮೇರಿಕಾ ದೇಶದಲ್ಲಿ ಡೆಕಲಾಬ ಅನ್ನತಕ್ಕ ಅಗ್ರಿಕಲ್ಚರಲ್ ಯೂನಿವರ್ಸಿಟಿಗೆ ಹೋಗಿದ್ದಾಗ ಅಲ್ಲಿ ಅವರು ಫೀಲ್ಡ್ ಡೇ ಮಾಡುತ್ತಿದ್ದರು. ಅಲ್ಲಿಗೆ ಹಳ್ಳಿಗಳಿಂದ ಬರುತಹ ರೈತರಿಗೆ ಊಟವನ್ನು ಹಾಕುವ ವ್ಯವಸ್ಥೆಯನ್ನು ಮಾಡಿದ್ದರು. ಅಲ್ಲಿನ ಆಡಳಿತ ವರ್ಗದವರು ರೈತಮುಖಂಡರ ಜೊತೆ ಕುಳಿತುಕೊಂಡು ಲೌಡ್‌ಸ್ಪೀಕರ್ ಇಟ್ಟುಕೊಂಡು ವ್ಯವಸಾಯದ ಬಗ್ಗೆ ಸಮಾಲೋಚನೆ ಮಾಡುತ್ತಿದ್ದರು. ಆದರೆ ನಮ್ಮ ದೇಶದ ವ್ಯವಸಾಯಕ್ಕೆ ಸಂಬಂಧಪಟ್ಟ ಯೂನಿವರ್ಸಿಟಿಗಳನ್ನು ನೋಡಿದರೆ ಇಲ್ಲಿನ ರೈತರಿಗೂ ಹಾಗೂ ಯೂನಿವರ್ಸಿಟಿಯ ಆಡಳಿತ ವರ್ಗದವರಿಗೂ ಯಾವ ಸಂಬಂಧವೂ ಇಲ್ಲದಂತೆ ಕಾಣುತ್ತಿದೆ. ಆದ್ದರಿಂದ ಮಾನ್ಯ ಕೃಷಿ ಸಚಿವರಲ್ಲಿ ಹಾಗೂ ಸರ್ಕಾರದವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಅಮೇರಿಕಾ ದೇಶದಲ್ಲಿ ನಡೆಯುತ್ತಿರುವಂತೆ ಇಲ್ಲಿಯೂ ರೈತರಲ್ಲಿ ಹಾಗೂ ಕೃಷಿಗೆ ಸಂಬಂಧಪಟ್ಟ ಇಲಾಖೆಯವರಲ್ಲಿ ಸೌಹಾರ್ದ ಭಾವನೆ

ಮೂಡಿ ಇಬ್ಬರೂ ಕೂಡಿ ಕೃಷಿಗೆ ಸಂಬಂಧಪಟ್ಟ ಚರ್ಚೆಯನ್ನು ಮಾಡಿ ದೇಶದ ಅಭಿವೃದ್ಧಿ ಮಾಡಲಿ ಎಂದು. ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲೂ ಒಂದೊಂದು ರೈತಸಂಘಗಳನ್ನು, ಸೊಸೈಟಿಗಳನ್ನು ಮಾಡಿ ಆ ಮೂಲಕ ರೈತರು ಇತರರೊಂದಿಗೆ ಕುಳಿತು ವ್ಯವಸಾಯದ ಅಭಿವೃದ್ಧಿಯ ಬಗ್ಗೆ ಚರ್ಚೆ ಮಾಡುವಂತೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಆ ಕಡೆ ಟೂರ್ ಹೋದಾಗ ಅಲ್ಲಿನ ರೈತಸಂಘಗಳ ಮುಖಾಂತರ ಮಂತ್ರಿಯವರು ಅಲ್ಲಿನ ರೈತರ ಕಷ್ಟ ಸುಖಗಳ ಬಗ್ಗೆ ವ್ಯವಸಾಯದ ಬಗ್ಗೆ ಚರ್ಚೆ ಮಾಡಲು ಈ ಸೊಸೈಟಿಗಳು ಬಹಳ ಅನುಕೂಲವಾಗುತ್ತವೆ. ಈ ಮೂಲಕ ಮಂತ್ರಿಗಳು ರೈತರ ತೊಂದರೆಗಳನ್ನು ತಿಳಿದು ಅವುಗಳ ನಿವಾರಣೆಗೆ ಅವರು ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಂಡು ಒಕ್ಕಲುತನದ ಅಭಿವೃದ್ಧಿ ಮಾಡಲು ಸಹಾಯಕವಾಗುತ್ತದೆ. ಹಾಗೂ ಇದರಿಂದ ರೈತರ ದಾರಿದ್ರ್ಯವನ್ನು ಹೋಗಲಾಡಿಸಲು ಸಾಧ್ಯವಾಗುತ್ತದೆ. ಆರ್ಥಿಕ ಭದ್ರತೆ ಮಾಡಲಾರದೆ ನೀವು ಎಷ್ಟು ಸಹಾಯ ಮಾಡಿದರೂ ಪ್ರಯೋಜನವಾಗುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತಾ ಇದ್ದೇನೆ. ಅಗ್ರಿಕಲ್ಚರ್ ಅಭಿವೃದ್ಧಿ ಮಾಡತಕ್ಕಂಥ ಸಹಕಾರ ಸಂಘಗಳೇನಿವೆ ಆ ಸಹಕಾರ ಸಂಘಗಳು ಇವತ್ತು ಕಂಪ್ಲೀಟಾಗಿ ಫೇಲ್ಯೂರಾಗಿವೆ. ಇದನ್ನು ನಾನು ನಮ್ಮ ಭಾಗದ ಅನುಭವದಿಂದ ಸ್ಪಷ್ಟವಾಗಿ ಹೇಳುತ್ತಾ ಇದ್ದೇನೆ. ತಾವು ಬೇಕಾದಷ್ಟು ಕಾನೂನುಗಳನ್ನು ಮಾಡಿದ್ದೀರಿ, ಆದರೆ ರೈತರಿಗೆ ಸಹಾಯ ಮಾಡತಕ್ಕ ಯಾವ ಬ್ಯಾಂಕುಗಳೂ ಅಷ್ಟು ಮುತುವರ್ಜಿ ವಹಿಸುತ್ತಾ ಇಲ್ಲ; ಸರ್ಕಾರದವರೂ ಕೂಡ ಅಷ್ಟಾಗಿ ಮುತುವರ್ಜಿ ವಹಿಸುತ್ತಾ ಇಲ್ಲ; ಅವರ ಮೇಲೆ ಆಗತಕ್ಕ ಅನ್ಯಾಯಗಳನ್ನು ಸರ್ಕಾರ ನೋಡಲಿಲ್ಲ ಎಂದರೆ ಪ್ರಗತಿ ಹೇಗೆ ಆಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಏನು ಹಾಕಿದ್ದೀರಿ ಇದನ್ನು ಯಾವ ಆಧಾರದ ಮೇಲೆ ಹಾಕಿದ್ದೀರಿ ಎಂದು ಕೇಳುತ್ತೇನೆ. ನಮ್ಮಲ್ಲಿ ಮರಳುಭೂಮಿ ಇದೆ. ಅಲ್ಲಿ ಒಂದು ಎಕರೆಗೆ ೭ ಚೀಲ ತೊಗರಿ ಬರುತ್ತದೆ ಎಂದು ಕ್ಯಾಲಿಕಲೇಷನ್ ಮಾಡಿ ನಮ್ಮ ರೈತರ ಚರ್ಮ ಸುಲಿಯುತ್ತಿದ್ದಾರೆ. ಪೂರ್ತಿ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸನ್ನು ಸರ್ಕಾರ ಕೂಡ ತೆಗೆದುಕೊಳ್ಳುತ್ತಾ ಇಲ್ಲ.

೧೨.೩೦ ಪಿ.ಎಂ.

ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕಿ ಅದರಿಂದ ಬರತಕ್ಕಂಥ ಹಣದಲ್ಲಿ ಕೇವಲ ೧೦ ಪರ್ಸೆಂಟ್ ಮಾತ್ರ ಸರ್ಕಾರಕ್ಕೆ ಹೋಗುತ್ತಾ ಇದೆ. ಇನ್ನು ೯೦ ಪರ್ಸೆಂಟ್ ಕರಪ್ಷನ್ ಆಫೀಸರ್ ರೈತರಿಂದ ಲೂಟಿ ಮಾಡುತ್ತಾ ಇದ್ದಾರೆ. ಸರ್ಕಾರಕ್ಕೆ ೯೦ ಪರ್ಸೆಂಟ್ ಅಗ್ರಿಕಲ್ಚರರ್ ಇನ್‌ಕಂ ಟ್ಯಾಕ್ಸ್ ಬರುವುದಿಲ್ಲ. ಇದನ್ನು ಕಂಡುಹಿಡಿದು, ಇದನ್ನು ತಡೆಹಿಡಿಯಬೇಕು. ಮಾನ್ಯ ಅರ್ಥ ಸಚಿವರಲ್ಲಿ ರೈತರ ಪರವಾಗಿ ಕೈ ಜೋಡಿಸಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್‌ನ್ನು ಎಗಜ್ಸಂಪ್ಟ್ ಮಾಡಿದರೆ ನಿಮಗೆ ದೊಡ್ಡ ಅನ್ಯಾಯವೇನೂ ಆಗುವುದಿಲ್ಲ. ಇವತ್ತು ರೈತರು ಎಷ್ಟು ಕಷ್ಟದಲ್ಲಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಆದುದರಿಂದ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಏನಿದೆ ಅದನ್ನು ಎಗ್ಸಂಪ್ಟ್ ಮಾಡಿದರೆ ಸರ್ಕಾರಕ್ಕೆ ಅಷ್ಟೇನೂ ಹಾನಿಯಾಗಲಿಕ್ಕಿಲ್ಲ ಎಂದು ನನಗನ್ನಿಸುತ್ತದೆ. ಇನ್ನೊಂದು ವಿಚಾರವೆಂದರೆ, ಒಕ್ಕಲುತನಕ್ಕೆ ಮುಖ್ಯವಾದ ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟಿನ ಪ್ರಗತಿ ಜೀರೋ ಆಗಿದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ, ಮಾನ್ಯ ಸಾರಿಗೆ ಸಚಿವರಾದ ಶ್ರೀ ಮಾನ್ ಗುಂಡೂರಾಯರು ಸಭೆಯಲ್ಲಿ ಕೂತಿದ್ದಾರೆ ಅವರು ನಮ್ಮನ್ನು, ಕೆಲವು ಶಾಸಕರನ್ನು ಕರೆಸಿ ಇನ್ನು ೩ ತಿಂಗಳಲ್ಲಿ ಸಮಸ್ಯೆಗಳನ್ನು ಬಗೆಹರಿಸುತ್ತೇನೆ ಎಂದು ಹೇಳಿದರು. ಮೊದಲನೇ ದಿನ ನಾನು ಲಗ್ಶುರಿ ಬಸ್ಸಿನಲ್ಲಿ ಹೋದಾಗ ಕುಡಿಯುವ ನೀರಿನ ವ್ಯವಸ್ಥೆ ಮಾಡಿದರು. ಎರಡನೇ ದಿವಸ ಆ ವ್ಯವಸ್ಥೆ ಇತ್ತು. ಮೂರನೇ ದಿವಸ ನೋಡುವಾಗ ಅಲ್ಲಿ ನೀರಿನ ಟ್ಯಾಂಕ್ ಇಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ನಮ್ಮ ಗುಲ್ಬರ್ಗ ಡಿವಿಜನ್ ವರ್ಸ್ಟ್ ನಂಬರ್ 'ಎಂ ಎಂದು ಅವರೇ ಹೇಳಿದ್ದಾರೆ. ೩ ತಿಂಗಳಲ್ಲಿ ಅದನ್ನೆಲ್ಲಾ ರಿಮೂವ್ ಮಾಡುತ್ತೇವೆ ಎಂದು ಅವರು ನಮ್ಮ ಭಾಗದಲ್ಲಿ ಬಂದಾಗ ಹೇಳಿದ್ದರು. ಆದರೆ ಇವತ್ತಿನವರೆಗೂ ವರ್ಸ್ಟ್ ಸ್ಟೇಜ್‌ನಲ್ಲೇ ಹೋಗುತ್ತಾ ಇದೆ. ಬೆಸ್ಟ್ ಸ್ಟೇಜ್‌ಗೆ ಬರುತ್ತಾ ಇಲ್ಲ. ಇದರಿಂದ ಕಮ್ಯುನಿಕೇಷನ್ ಫೆಸಿಲಿಟಿಯನ್ನು ಒದಗಿಸುವುದಕ್ಕೆ ಸರ್ಕಾರಕ್ಕೆ ಸಾಮರ್ಥ್ಯವಿಲ್ಲ ಎಂದಾಯಿತು. ಮಹಾರಾಷ್ಟ್ರದಲ್ಲಿರತಕ್ಕ ಬಸ್‌ಗಳನ್ನು ನೋಡಿ, ಅಲ್ಲಿ ರೇಡಿಯೋ ಟೈಂ ಫಾಲೋ ಮಾಡುವ ಹಾಗೆ ಕರೆಕ್ಟಾಗಿ ನಡೆಯುತ್ತಾರೆ. ಕಮ್ಯುನಿಕೇಷನ್ ಬಗ್ಗೆ ವಿರೋಧ ಪಕ್ಷದವರು ಹೇಳುವುದು ಅಷ್ಟೇ ಅಲ್ಲದೆ ಆಡಳಿತ ಪಕ್ಷದವರೇ ಬಹಳ ಸುಂದರವಾದ ರೀತಿಯಲ್ಲಿ "ಉಗಾದಿ ಹಬ್ಬ ಬಸ್ಸಿನಲ್ಲೇ ಆಯಿತು ಎಂದು

ಹೇಳಿದ್ದಾರೆ. ಇವತ್ತು ಬಸ್ಸುಗಳನ್ನು ನಡೆಸತಕ್ಕಂಥ ಡ್ರೈವರ್ಸ್ ಮತ್ತು ಕಂಡಕ್ಟರ್ಸ್ ಫೈಲ್ಯೂರ್ ಆಗಿದ್ದಾರೆ. ಏಕೆಂದರೆ, ಎಲ್ಲಿಯ ತನಕ ಪ್ರೊಹಿಬಿಷನ್ ಮಾಡುವುದಿಲ್ಲ, ಎಲ್ಲಿಯ ತನಕ ಡ್ರೈವರ್ಸ್, ಕಂಡಕ್ಟರ್ಸ್ ಕುಡಿಯುವುದು ನಿಲ್ಲಿಸುವುದಿಲ್ಲ ಅಲ್ಲಿಯ ತನಕ ದೇಶದಲ್ಲಿ ಕಮ್ಯುನಿಕೇಷನ್ ಸೌಲಭ್ಯ ಸರಿಯಾಗಿ ದೊರೆಯುವುದಿಲ್ಲ, ದೇಶ ಹಾಳಾಗುತ್ತದೆ ಎಂದು ಮಾನ್ಯ ಸದಸ್ಯರಾದ ತಾಯಮ್ಮನವರು ಹೇಳಿದ್ದಾರೆ. ಅದನ್ನು ನಾನು ಪುಷ್ಟೀಕರಿಸುತ್ತಾ, ಕೇಳಿಕೊಳ್ಳುವುದೇನೆಂದರೆ, ದೇಶದ ಪ್ರಗತಿ ಬೆಸ್ಟ್ ಮಾಡುವುದಕ್ಕೆ ಕಮಿಷನ್‌ಗಳನ್ನು, ಟ್ರಿಬ್ಯೂನಲ್‌ಗಳನ್ನು ಏನೂ ಮಾಡಿದರೂ ಕೂಡ ಎಲ್ಲಿಯ ತನಕ ಪ್ರೊಹಿಬಿಷನ್ ಮಾಡುವುದಿಲ್ಲ ಆ ತನಕ ದೇಶದ ಪ್ರಗತಿಯಾಗುವಹಾಗಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಛೇರ್ಮನ್‌ರವರು.—ಈಗ ಸಮಯದ ಕೊರತೆ ಇದೆ. ಮಾನ್ಯ ಹಣಕಾಸಿನ ಮಂತ್ರಿಗಳು ಈಗ ಉತ್ತರ ಕೊಡಬೇಕಾಗುತ್ತದೆ. ಪಟ್ಟಿಯೊಳಗೆ ಇನ್ನೂ ೪ ಜನರ ಹೆಸರು ಇದೆ. ಈ ೪ ಜನರಿಗೆ ಈಗ ಅವಕಾಶ ಮಾಡಿಕೊಡುವುದಕ್ಕೆ ಸಾಧ್ಯವಿಲ್ಲದಂಥ ಪರಿಸ್ಥಿತಿ ಇರುವುದರಿಂದ ದಯಮಾಡಿ ಅವರುಗಳು ಸಹಕರಿಸಬೇಕು. ಅವರ ವಿಪ್ ಇದ್ದಾರೆ, ಲೀಡರ್ ಇದ್ದಾರೆ, ಮುಂದೆ ಯಾವಾಗಲಾದರೂ ಅವಕಾಶ ಮಾಡಿಕೊಂಡು ಮಾತನಾಡಲು ನಮ್ಮ ಆಕ್ಷೇಪಣೆ ಇಲ್ಲ. ಸಮಯದ ಕೊರತೆ ಇದೆ. ಆದ್ದರಿಂದ ಮಾನ್ಯ ಸದಸ್ಯರು ತಕ್ಷಣ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಬಿ. ಬಿ. ಪಾಟೀಲ್.—ಅಮೇರಿಕಾ ದೇಶಕ್ಕೆ ಹೋಗಿ ಬಂದ ನಂತರ ಮಾನ್ಯ ಸದಸ್ಯರು ಅಲ್ಲಿನ ತಮ್ಮ ಅನುಭವವನ್ನು ಕೊಡಬೇಕು ಎಂದು ಇದ್ದರೂ ಕೂಡ ತಾವು ರಿಸ್ಟ್ರಿಕ್ಷನ್ ಹಾಕಿದ್ದೀರಿ. ನಾನು ಡೀಟೈಲಾಗಿ ಹೋಗದೆ ಕೆಲವೊಂದು ಪಾಯಿಂಟ್ಸ್‌ನ್ನು ಮಾತ್ರ ಹೇಳುತ್ತೇನೆ. ಮಾನ್ಯ ಸ್ಪೀಕರ್ ರವರು ಹೌಸಿಂಗ್ ಬೋರ್ಡ್ ಛೇರ್ಮನ್ ಆಗಿದ್ದಾಗ ನಮ್ಮ ಭಾಗದಲ್ಲಿ ಬಂದು ಮನೆಗಳನ್ನು ಕಟ್ಟಿಕೊಡುವುದಾಗಿ ಪ್ರಾಮಿಸ್ ಮಾಡಿದ್ದರು. ಗುಲ್ಬರ್ಗ ತಾಲ್ಲೂಕು ಆಳಂದ ಪಾಪ್ಯುಲೇಷನ್‌ನಲ್ಲಿ ಮೂರನೇ ಸ್ಥಾನದಲ್ಲಿದೆ. ನಮ್ಮದು ಮುನಿಸಿಪಲ್ ಟೌನ್ ಆಗಿದ್ದರೂ ಕೂಡ ಒಂದೂ ಕೂಡ ಮನೆಯನ್ನು ಕೊಟ್ಟಿಲ್ಲ. ಹೌಸಿಂಗ್ ಬೋರ್ಡ್ ಪ್ರೋಗ್ರಾಮನ್ನು ತಾಲ್ಲೂಕುವೈಸ್ ಡಿಸ್ಟ್ರಿಕ್ಟ್‌ವೈಸ್ ತೆಗೆದುಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅಲ್ಲಿರತಕ್ಕವರು ಜನರಲ್ಲ ಕುರಿಗಳು ಎಂದು ಸರ್ಕಾರದ ಗಮನಕ್ಕೆ ಬಂದಿದೆಯೋ ಎಂದು ಖೇದದಿಂದ ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಎಜುಕೇಷನ್ ತೆಗೆದುಕೊಂಡರೆ, ಶಿಕ್ಷಕರಿಲ್ಲ. ನಮ್ಮಲ್ಲಿ ಜೂನಿಯರ್ ಕಾಲೇಜು ಇದೆ. ಅದರಲ್ಲಿ ಇರತಕ್ಕಂಥ ಕೆಮಿಸ್ಟ್ರಿ ಲೆಕ್ಚರರ್ಸ್‌ನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. ಪರೀಕ್ಷೆ ಸಮಯದಲ್ಲಿ ಹೀಗಾದರೆ ಹುಡುಗರ ಗತಿಯೇನು, ಇದನ್ನು ಶಿಕ್ಷಣ ಖಾತೆಯವರು ಗಮನಿಸಿಲ್ಲ. ಇದರಿಂದ ಹುಡುಗರಿಗೆ ಲಾಸ್ ಆಗುತ್ತಿದೆ. ಇದಕ್ಕೆ ಯಾರು ಹೊಣೆಗಾರರು ಎಂದು ನಾನು ಸ್ಪಷ್ಟವಾಗಿ ಸರ್ಕಾರಕ್ಕೆ ಕೇಳಬಯಸುತ್ತೇನೆ.

ಗ್ರೀನ್ ರೆವಲ್ಯೂಷನ್‌ನಲ್ಲಿ ಸರ್ಕಾರ ನಿಜವಾದ ವಿಶ್ವಾಸವನ್ನಿಟ್ಟಿದ್ದರೆ, ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡರೆ ಶಾಸಕರನ್ನಾಗಲೀ, ರೈತರ ಸಂಘಗಳ ಪ್ರತಿನಿಧಿಗಳನ್ನಾಗಲೀ ಸ್ಟಡಿ ಟೂರ್ ಕಳುಹಿಸಬೇಕು. ಪಂಜಾಬ್, ಹರಿಯಾಣ ಮುಂತಾದ ರಾಜ್ಯಗಳಲ್ಲಿ ಹಾಗೂ ಬೇರೆ ದೇಶಗಳಲ್ಲಿ ಒಕ್ಕಲುತನವನ್ನು ಚೆನ್ನಾಗಿ ಅಭಿವೃದ್ಧಿ ಮಾಡಿದ್ದಾರೆ. ಅಂತಹ ಕಡೆಗಳಿಗೆ ಹೋಗಿ ನೋಡಿಕೊಂಡು ಬಂದರೆ ಜನಗಳಿಗೆ ಅನುಭವ ಬರುತ್ತದೆ. ಈ ಬಡ್ಜೆಟಿನಲ್ಲಿ ಸ್ಟಡಿ ಟೂರ್ ಪ್ರೋಗ್ರಾಂ ಬಗ್ಗೆ ಎಲ್ಲೂ ಕಾಣಿಸಿಲ್ಲ. ಆದುದರಿಂದ ಮಾನ್ಯ ಯಾಹ್ಯಾರವರು ರೈತರಿಗೆ ಮಾರ್ಗದರ್ಶನ ಮಾಡಿ, ಶಾಸಕರಾಗಲೀ, ರೈತರ ಪ್ರತಿನಿಧಿಗಳಾಗಲೀ ಅವರು ತಮ್ಮ ಜೀವನದಲ್ಲಿ ಅನುಭವ ಪಡೆಯಲಿಕ್ಕೆ ಸ್ಟಡಿ ಟೂರನ್ನು ಹಾಕಿಸಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತಾ ಇದ್ದೇನೆ.

ಇನ್ನು ಇಂಡಸ್ಟ್ರೀಸ್ ವಿಚಾರ ತೆಗೆದುಕೊಂಡರೆ, ನಮ್ಮಲ್ಲಿ ವೀವರ್ಸ್ ಸಾಕಷ್ಟು ಮಂದಿ ಇದ್ದಾರೆ. ಇಂಡಸ್ಟ್ರಿಯಲ್ ಪ್ರೋಗ್ರಾಂ ನಮ್ಮಲ್ಲಿ ನಡೆದಿಲ್ಲ. ನಮ್ಮ ದೇಶದಲ್ಲಿ ನಿರುದ್ಯೋಗಿಗಳು ಬೆಳೆಯುತ್ತಾ ಇದ್ದಾರೆ. ನಿರುದ್ಯೋಗಿ ಗ್ರಾಜುಯೇಟ್ಸ್ ನಮ್ಮಲ್ಲಿದ್ದರೂ ಕೂಡ ಬಜೆಟ್‌ನಲ್ಲಿ ಅವರಿಗೆ ಸಫಿಷಿಯೆಂಟ್ ಅನುಕೂಲವನ್ನು ಒದಗಿಸಿಕೊಟ್ಟಿಲ್ಲ.

ಭುಟ್ಟೋಗೆ ಗಲ್ಲಿಗೇರಿಸುವ ಒಂದೇ ಒಂದು ಶಿಕ್ಷೆಯನ್ನು ಕೊಟ್ಟು ಗಲ್ಲಿಗೇರಿಸಿದ್ದಾರೆ. ಆದರೆ ನಮ್ಮ ದೇಶದಲ್ಲಿ ರೈತನ ಮೇಲೆ ಎಷ್ಟು ಅನ್ಯಾಯಗಳಾಗುತ್ತಿವೆ ಎನ್ನುವುದನ್ನು ಹೇಳುವುದಕ್ಕೆ ಅಸಾಧ್ಯ.

ವಾದುದು. ಇವತ್ತು ರೈತರ ಐ.ಪಿ. ಸೆಟ್ಟುಗಳನ್ನು ಡಿಸ್‌ಕನೆಕ್ಟ್ ಮಾಡುತ್ತಾ ಇದ್ದಾರೆ. ವಿಜಿಲೆನ್ಸ್‌ನವರು ಅವರ ಮೇಲೆ ಕೇಸ್ ಹಾಕುತ್ತಾ ಇದ್ದಾರೆ. ಕ್ರಿಮಿನಲ್ ಕೇಸ್ ಹಾಕಿದ್ದಾರೆ. ಈ ರೀತಿ ಐ. ಪಿ. ಸೆಟ್ಟುಗಳನ್ನು ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ. ರೈತರಿಗೆ ಬಹಳ ತೊಂದರೆಯಾಗಿದೆ, ನಮ್ಮ ಕಡೆ ಟೂರ್ ಮಾಡಿ ಬಂದು ನೋಡಿ ಎಂದು ಸಚಿವರವನ್ನು ಕೇಳಿಕೊಂಡಾಗ ಅವರು ಸಮ್ಮರ್ ಆದ ನಂತರ ನಿಮ್ಮ ಕಡೆ ಬರುತ್ತೇನೆ ಎಂದು ಹೇಳಿದರು. ರಾಷ್ಟ್ರಕ್ಕೆ ಆಹಾರ ಧಾನ್ಯಗಳನ್ನು ಉತ್ಪತ್ತಿಮಾಡಿ ಕೊಡುವಂಥ ರೈತರ ಐ. ಪಿ ಸೆಟ್ಟುಗಳನ್ನು ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ. ವಿಜಿಲೆನ್ಸ್‌ನವರು ಕೇಸ್ ಹಾಕಿದ್ದಾರೆ. ರೈತರ ಮೇಲೆ ಹತ್ತಾರು ಸಾವಿರ ರೂಪಾಯಿಗಳ ದಂಡವನ್ನು ಹಾಕಿದ್ದಾರೆ. ದಂಡ ಕೊಡದೇ ಹೋದರೆ ಜೈಲಿಗೆ ಹೋಗಬೇಕು. ಜೈಲಿನಿಂದ ಕೋರ್ಟಿಗೆ ಹೋಗುತ್ತಾ ಇರಬೇಕು. ಇದೇ ಏನು ಗರೀಬರ ಸರ್ಕಾರ ಎಂದು ನಾನು ಸ್ಪಷ್ಟವಾಗಿ ಕೇಳುತ್ತಾ ಇದ್ದೇನೆ. ಮಾನ್ಯ ಕೆ.ಇ.ಬಿ, ಸಚಿವರು ಕೂತು ಕೇಳುತ್ತಾರೆಂದು ನಾನು ತಿಳಿದುಕೊಂಡಿದ್ದೆ, ದುರ್ದೈವದಿಂದ ಅವರು ಎದ್ದು ಹೋಗಿದ್ದಾರೆ. ರೈತರಿಗೆ ಇಷ್ಟೆಲ್ಲಾ ಕಷ್ಟದ ಜೊತೆಗೆ ಕೆ.ಇ.ಬಿ. ಯವರ ಗಲಾಟೆ ಬೇರೆ ಇದೆ. ಕೆ.ಇ.ಬಿ. ಯವರು ಇವರ ಜೊತೆಗೆ ಸಹಕರಿಸುತ್ತಿಲ್ಲ. ಇದನ್ನೆಲ್ಲಾ ನೋಡಿದರೆ ಕ್ರಾಂತಿಯಾಗಬಹುದು ಎಂದು ಕಾಣುತ್ತದೆ ಎಂದು ಹೇಳಿ ಮಾನ್ಯ ಅರ್ಥ ಸಚಿವರಾದ ಯಾಹ್ಯಾರವರು ಮಂಡಿಸಿದ ಬಡ್ಜೆಟ್ ಏನಿದೆ ಇದು ತೃಪ್ತಿಕರವಾಗಿಲ್ಲ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತಾ, ನನಗೆ ಇಷ್ಟು ಟೈಂ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

(ಹಲವಾರು ಸದಸ್ಯರುಗಳು ಎದ್ದು ನಿಂತುಕೊಂಡು ತಮಗೂ ಬಡ್ಜೆಟ್ ಮೇಲೆ ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಲು ಶುರು ಮಾಡಿದರು........... ಆಗ ....)

ಚೇರ್‌ಮನ್‌ರವರು.—ಸಭಾಧ್ಯಕ್ಷರು ಎದ್ದು ನಿಂತುಕೊಂಡಾಗ ತಾವು ಯಾರೂ ಈ ರೀತಿಯಾಗಿ ಎದ್ದು ನಿಂತುಕೊಳ್ಳಬಾರದು ದಯವಿಟ್ಟು ಕುಳಿತುಕೊಳ್ಳಿ. ಮೊದಲು ಕಾನೂನನ್ನು ಪರಿಪಾಲನೆ ಮಾಡಿ. ಈಗ ಮಾನ್ಯ ಮಂತ್ರಿಗಳವರು ಚರ್ಚೆಗೆ ಉತ್ತರ ಕೊಡಬೇಕಾಗಿದೆ. ಅವರಿಗೆ ಕಡಿಮೆ ಎಂದರೂ ೧–೨ ಗಂಟೆಗಳ ಕಾಲ ಬೇಕಾಗಬಹುದು, ಇನ್ನು ನೀವು ಎಲ್ಲರೂ ಮಾತನಾಡಲು ಶುರು ಮಾಡಿದರೆ ತುಂಬಾ ಹೊತ್ತಾಗುತ್ತದೆ. ತಾವು ಭಾಷಣ ಮಾಡಲು ಹಿಂದಿನ ದಿನಗಳಲ್ಲಿ ಸಾಕಷ್ಟು ಅವಕಾಶವಿತ್ತು ಅದನ್ನು ನೀವು ಸರಿಯಾಗಿ ಉಪಯೋಗಿಸಿಕೊಳ್ಳಲಿಲ್ಲವೆಂದು ವಿಶಾದದಿಂದ ಹೇಳಬೇಕಾಗುತ್ತದೆ. ಆದುದರಿಂದ ಮುಂದೆ ಇನ್ನು ಡಿಮ್ಯಾಂಡ್‌ಗಳ ಬಗ್ಗೆ ಚರ್ಚೆ ಬಂದಾಗ ಯಾವುದಾದರೂ ವಿಷಯದ ಬಗ್ಗೆ ಮಾತನಾಡಬಹುದು ಆದುದರಿಂದ ಈಗ ಮಾನ್ಯ ಸದಸ್ಯರುಗಳು ದಯವಿಟ್ಟು ಮಾನ್ಯ ಮಂತ್ರಿಗಳವರಿಗೆ ಉತ್ತರ ಕೊಡಲು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಶ್ರೀನಿವಾಸ್.—ನನಗೆ ಬಡ್ಜೆಟ್‌ನ ಮೇಲೆ ಮಾತನಾಡಲು ಅವಕಾಶ ಕೊಡುವುದಿಲ್ಲವೆನ್ನುವುದಾದರೆ ನಾನು ವಾಕ್‌ಔಟ್ ಮಾಡುತ್ತೇನೆ.

(ಅನಂತರ ಮಾನ್ಯ ಸದಸ್ಯರು ವಾಕ್‌ಔಟ್ ಮಾಡಿದರು)

† ಶ್ರೀ ಎಸ್. ಎಂ. ಯಾಹ್ಯಾ (ಅರ್ಥ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಕಳೆದ ೫–೬ ದಿವಸಗಳಿಂದ ಬಡ್ಜೆಟ್ ಮೇಲಿನ ಸಾಮಾನ್ಯ ಚರ್ಚೆಯ ಮೇಲೆ ಮಾನ್ಯ ಸದಸ್ಯರುಗಳು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದರಲ್ಲಿ ೨೮–೨೯ ಜನ ಮಾನ್ಯ ಸದಸ್ಯರುಗಳು ಭಾಗವಹಿಸಿದ್ದರು. ಸರ್ಕಾರದ ನೀತಿ ಬಗ್ಗೆ, ಸರ್ಕಾರದ ಧೋರಣೆ ಬಗ್ಗೆ ವಿಚಾರ ಸಹ ಹೇಳಿದ್ದಾರೆ. ಅದೇ ರೀತಿಯಲ್ಲಿ ನೀತಿ ಧೋರಣೆಗಳನ್ನು ಯಾವರೀತಿಯಲ್ಲಿ ಜಾರಿಗೆ ತರಬೇಕು ಮತ್ತು ತರುತ್ತಿದ್ದೇವೆಂದೂ ಕೂಡ ಹೇಳಿದ್ದಾರೆ. ಕೆಲವರಿಗೆ ನಮ್ಮ ನೀತಿಯ ಬಗ್ಗೆ ಎಲ್ಲೂ ತಪ್ಪು ಕಂಡು ಹಿಡಿಯಲಿಕ್ಕೆ ಆಗದಿದ್ದರೂ ಇಂಪ್ಲಿಮೆಂಟೇಷನ್ ಮಾಡುವುದರಲ್ಲಿ ನಿಧಾನವಾಗಿದೆ ಎಂದು ತಮ್ಮ ಅಭಿಪ್ರಾಯವನ್ನು ಸಹ ಕೊಟ್ಟಿದ್ದಾರೆ. ಅವರೆಲ್ಲರನ್ನೂ ನಾನು ಅಭಿನಂದಿಸಲಿಚ್ಛಿಸುತ್ತೇನೆ. ಈ ವರ್ಷದ ಚರ್ಚೆಯಲ್ಲಿ ಬಹಳಷ್ಟು ತೀವ್ರವಾದ ಟೀಕೆಗಳು ಬರಲಿಲ್ಲ ಮಾನ್ಯ ವಿರೋಧ ಪಕ್ಷದವರಲ್ಲಿ ಕೆಲವು ಸದಸ್ಯರುಗಳು ಸಹ ಕೆಲವು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ, ಮತ್ತು ಸರ್ಕಾರ ಮಾಡುತ್ತಿರುವಂಥ ಕಾರ್ಯಗಳನ್ನು ಸಹ ಮೆಚ್ಚಿದ್ದಾರೆ. ಈ ಸಭೆಯಲ್ಲಿ ನಮ್ಮ ಬಡ್ಜೆಟ್‌ನ ವಿಚಾರದಲ್ಲಿ ಬಹಳ ಮಟ್ಟಿಗೆ ಒಳ್ಳೆಯ ಅಭಿಪ್ರಾಯವನ್ನು ಮಾನ್ಯ ಸದಸ್ಯರುಗಳು ಕೊಟ್ಟಿದ್ದಾರೆ. ಇನ್ನು ಕೆಲವರು ಇನ್ನು ಉತ್ತಮ ರೀತಿಯಲ್ಲಿ ಕೆಲಸ ಮಾಡಬಹುದಾಗಿತ್ತು ಎನ್ನುವ ಭಾವನೆಯನ್ನು ಸಹ ಕೆಲವರು ವ್ಯಕ್ತಪಡಿಸಿದ್ದಾರೆ. ಇವತ್ತು ನಮ್ಮ ಸರ್ಕಾರ ಕೆಲವೇ ವರ್ಷಗಳಲ್ಲಿ ಒಳ್ಳೊಳ್ಳೆಯ

ಕಾರ್ಯಗಳನ್ನು ಮಾಡಿ ಭಾರೀ ಜನಪ್ರಿಯತೆಯನ್ನು ಗಳಿಸಿ, ಜನರ ನೇರ ಸಂಪರ್ಕವನ್ನು ಬೆಳಸಿ, ಜನರ ಹಿತವನ್ನು ಕಾಪಾಡುವ ಕೆಲಸವನ್ನು ಬಹಳ ಧೈರ್ಯದಿಂದ ಮಾಡಿದೆ. ಇದರಿಂದ ನಮ್ಮ ಪರ್‌ಫಾರ ಮೆನ್ಸ್ ಎಷ್ಟೆಂಬುದು ಗೊತ್ತಾಗುತ್ತದೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗ ನಮ್ಮ ಪಕ್ಷದ ಮೇಲೂ, ನಮ್ಮ ಸರ್ಕಾರದ ಮೇಲೂ ಬಹಳ ಹೆಚ್ಚಿನ ಗೌರವ ಪ್ರೀತಿ ವಿಶ್ವಾಸ ಹೆಚ್ಚಾಗಿದೆ. ಈಗ ಕರ್ನಾಟಕ ರಾಜ್ಯ ಅಭಿವೃದ್ಧಿಯ ಯುಗದಲ್ಲಿದೆ, ಅಭಿವೃದ್ಧಿಯಾಗುತ್ತಿದೆ. ಇನ್ನು ಹೆಚ್ಚು ಹೆಚ್ಚು ಅಭಿವೃದ್ಧಿ ಸಹ ಆಗಲಿಕ್ಕೆ ಇದೆ. ಈ ರೀತಿ ಅಭಿವೃದ್ಧಿಯಾಗುವುದಕ್ಕೆ ಕಾರಣವಾದರೂ ಏನು ಎಂದರೆ ಸರ್ಕಾರ ತನ್ನ ದಿಟ್ಟವಾದ ಆರ್ಥಿಕ ನೀತಿ ಏನಿದೆ ಅದು ಯಾವುದೇ ಒಂದು ಸರ್ಕಾರಕ್ಕೆ ತನ್ನ ಆರ್ಥಿಕ ನೀತಿ ಇರುವುದಿಲ್ಲವೋ, ಎಕನಾಮಿಕ್ ಡೈರೆಕ್ಷನ್, ಸೋಶಿಯಲ್ ಎಕನಾಮಿಕ್ ಪಾಲಿಸಿ ಪ್ರೋಗ್ರಾಂ ಇರುವುದಿಲ್ಲವೋ ಅಂಥಾ ಸರ್ಕಾರ ಉತ್ತಮವಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದರೆ ನಾವು ೧೯೭೨ ರಿಂದ ನಮ್ಮ ಎಕನಾಮಿಕ್ ಡೈರೆಕ್ಷನ್, ಸೋಶಿಯೋ ಎಕನಾಮಿಕ್ ಪಾಲಿಸಿಯನ್ನು ಇಟ್ಟು ಕೊಂಡು ಕೆಲಸ ಮಾಡುತ್ತಿದ್ದೇವೆ. ನಮ್ಮ ದೇಶದಲ್ಲಿ ಸಮಾನತೆಯನ್ನು ತರಬೇಕು ಅಂತ ಹೇಳಿ ಅದಕ್ಕಾಗಿ ನಮ್ಮ ಮುಖ್ಯಮಂತ್ರಿಗಳವರು ಬಹಳಷ್ಟು ಪ್ರಯತ್ನ ಪಡುತ್ತಿದ್ದಾರೆ. ಇದರಿಂದ ಉತ್ತಮವಾದ ಕಾರ್ಯಗಳು ಆಗುವುದಕ್ಕೆ ಸಾಧ್ಯವಾಗಿದೆ. ಅದಕ್ಕಾಗಿ ನಮ್ಮ ದೇಶದಲ್ಲಿ ಅಭಿವೃದ್ಧಿ ಇನ್ನೊಂದು ಕಡೆ ನಮ್ಮ ಒಂದು ಆಡಳಿತವೇನಿದ ಅದರಲ್ಲೂ ನಮ್ಮ ಆರ್ಥಿಕ ಫೈನಾನ್ಸ್ ಮ್ಯಾನೇಜ್‌ಮೆಂಟ್ ಏನಿದೆ ಅದು ತೀರಾ ಚೆನ್ನಾಗಿರುವುದರಿಂದ ನಮ್ಮ ಪ್ರೋಗ್ರಾಂ ಪಾಲಿಸಿಗಳಿಂದ ಒಳ್ಳೆಯ ರಿಜಲ್ಟ್ ಬರುವುದಕ್ಕೆ ಕಾರಣ ವಾಯಿತು. ಕೆಲವು ಒಳ್ಳೆಯ ವಿಚಾರಗಳನ್ನೂ ಸಹ ಮಾನ್ಯ ಸದಸ್ಯರುಗಳು ಹೇಳಿದ್ದಾರೆ ಅದು ನಿಜ ವಾಗಿಯೂ ಒಳ್ಳೆಯ ವಿಚಾರ. ಇವತ್ತು ನಮ್ಮ ಸರ್ಕಾರದವರು ಕರ್ನಾಟಕ ರಾಜ್ಯ ಎಲ್ಲಾ ವಿಧದಲ್ಲಿಯೂ ಅಭಿವೃದ್ಧಿ ಹೊಂದಬೇಕೆಂದು ನಾನಾ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಕಾರ್ಮಿಕ ವರ್ಗದವರ ಅಭಿವೃದ್ಧಿಗಾಗಿ, ಗ್ರಾಮದಲ್ಲಿರುವ ಮತ್ತು ಹಳ್ಳಿಗಳಲ್ಲಿರುವ ರೈತರ ಅಭಿವೃದ್ಧಿಗಾಗಿ ಮತ್ತು ಬಡವರ ಪ್ರಗತಿಗಾಗಿ ಈಗಿರುವ ಸ್ಕೀಂಗಳ ಜೊತೆಗೆ ಇನ್ನು ಕೆಲವು ಯೋಜನೆಗಳನ್ನು ಸಹ ಹಾಕಿಕೊಳ್ಳಲಾಗಿದೆ. ಈ ರೀತಿಯಾಗಿ ಒಳ್ಳೊಳ್ಳೆಯ ಸ್ಕೀಂಗಳನ್ನು ಹಾಕಿಕೊಂಡು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಮಾಡಬೇಕೆಂಬುದೇ ನಮ್ಮ ಸರ್ಕಾರ ನೀತಿಯಾಗಿದೆ ಹಾಗೂ ಗುರಿಯಾಗಿದೆ. ಅದಕ್ಕಾಗಿ ಹೊಸದಾಗಿ ಒಂದು ಪ್ರೋಗ್ರಾಂ ಅಂತ ಹಾಕಿಕೊಂಡಿದ್ದೇವೆ ಅದೇ "ಭಾಗ್ಯ ಜ್ಯೋತಿ" ಅಂತ. ಇವತ್ತು ಗ್ರಾಮಗಳಲ್ಲಿ ವಿದ್ಯುತ್ ಛಕ್ತಿ ಬಂದರೂ ದೊಡ್ಡವರ ಮನೆಗಳಲ್ಲಿ ವಿದ್ಯುತ್ ಇರುವುದನ್ನು ನೋಡಿಕೊಂಡು ಎಷ್ಟು ದಿವಸ ಕೂತುಕೊಂಡಿರಲು ಸಾಧ್ಯ, ಅವನ ಆರ್ಥಿಕ ದುರ್ಬಲತೆಯಿಂದ ಅವನು ತನ್ನ ಮನೆಗೆ ವಿದ್ಯುತ್ ಹಾಕಿಸಿಕೊಳ್ಳುವ ಹಾಗಿಲ್ಲ, ಇದು ಎಲ್ಲರಿಗೂ ಸರಿಯಾದ ರೀತಿಯಲ್ಲಿ ದೊರೆಯಬೇಕು ಅಂತ ಹೇಳಿ ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಇದರಿಂದ ಶೇಕಡ ೬೨ ರಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸಿ ಕೊಟ್ಟ ಹಾಗೆ ಆಗುತ್ತದೆ. ಇದರಲ್ಲಿ ಎಷ್ಟು ಹೌಸ್ ಹೋಲ್ಡ್ಸ್ ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡಿ ದ್ದಾರೆಂದರೆ ಬರೀ ಶೇಕಡ ೧೨ ಮಾತ್ರ. ಬಡವರಾದವರಿಗೆ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ.

ಅದಕ್ಕಾಗಿ ನಾವು ಅವರ ಮನೆಗೆ ಒಂದು ಕನೆಕ್ಷನ್ ಕೊಟ್ಟು ಒಂದು ಬಲ್ಬನ್ನಾದರು ಕೊಡಬೇಕೆಂದು ಹೇಳಿ ಭಾಗ್ಯಜ್ಯೋತಿ ಯೋಜನೆಯನ್ನು ಇಟ್ಟಿದ್ದೇವೆ. ಈ ಒಂದು ಯೋಜನೆಯಿಂದ ಬಡವನ ಮನೆಗೆ ಬೆಳಕು ಮತ್ತು ಅವನ ಮಕ್ಕಳಿಗೆ ಓದಲಿಕ್ಕೆ ಕೂಡ ಅನುಕೂಲವಾಗುತ್ತದೆ. ಈ ಒಂದು ಭಾಗ್ಯಜ್ಯೋತಿ ಯೋಜನೆ ಇಡೀ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ದೊಡ್ಡ ಕ್ರಾಂತಿಯನ್ನು ತರುವಂತಹದ್ದಾಗಿದೆ. ಈ ಒಂದು ಕ್ರಾಂತಿ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಯಶಸ್ಸನ್ನು ಗಳಿಸುತ್ತದೆಂದು ನಂಬಿದ್ದೇನೆ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಬಂದಿದ್ದರೂ ಬಡವರಿಗೆ ವಿದ್ಯುಚ್ಛಕ್ತಿ ದೊರೆತಿಲ್ಲ. ಕರ್ನಾಟಕ ರಾಜ್ಯದ ೧೭೫ ತಾಲ್ಲೂಕುಗಳ ೪ ಸಾವಿರ ಗ್ರಾಮಗಳಿಗೆ ಈ ಯೋಜನೆಯನ್ನು ನಾವು ಈಗಾಗಲೇ ಇಂಪ್ಲಿಮೆಂಟೇಷನ್ ಮಾಡಬೇಕೆಂದಿದ್ದೇವೆ. ೪ ಸಾವಿರ ಗ್ರಾಮಗಳಲ್ಲಿ ಪ್ರತಿಯೊಂದು ಗ್ರಾಮದಲ್ಲಿ ೧೦-೧೫ ಮನೆಗಳಿಗಾದರೂ ಬೆಳಕನ್ನು ಕೊಡಬೇಕೆಂದಿದ್ದೇವೆ. ಹೀಗೆ ೧೦-೧೫ ಮನೆಗಳಿಗೆ ಬೆಳಕನ್ನು ಕೊಟ್ಟರೆ ೪ ಸಾವಿರ ಗ್ರಾಮಗಳ ಪೈಕಿ ೬೦ ಸಾವಿರದಷ್ಟು ಮನೆಗಳಿಗೆ ಬೆಳಕು ಕೊಟ್ಟಂತಾಗು ತ್ತದೆ. ಇದನ್ನು ಈ ವರ್ಷ ಪ್ರಾರಂಭಿಸಿದ್ದೇವೆ. ಅದಕ್ಕಾಗಿ ೨೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಇದನ್ನು ನೂಕ್ಲಿಯಸ್ ಆಗಿ ಇಟ್ಟುಕೊಂಡು ಬ್ಯಾಂಕುಗಳಿಂದಾಗಲಿ ಅಥವಾ ಎಲೆಕ್ಟ್ರಿಸಿಟಿ ಬೋರ್ಡ್ ನಿಂದಾಗಲಿ ಹಣವನ್ನು ೪ ಪರ್ಸೆಂಟ್ ಬಡ್ಡಿಗೆ ತೆಗೆದುಕೊಂಡು ಪ್ರತಿಯೊಂದು ಮನೆಗೂ ಕನೆಕ್ಷನ್ ಕೊಡ

ಲಿಕ್ಕೆ ೨೦೦ ರೂಪಾಯಿಗಳನ್ನು (೧೦-೧೫ ವರ್ಷದ ನಂತರ ಕೊಟ್ಟರು ಸಾಕು ಎಂದು) ಲಾಂಗ್‌ಟರ್ಮ್ ಲೋನ್ ಆಗಿ ಕೊಡಬೇಕೆಂದು ಮಾಡಿದ್ದೇವೆ. ಜೊತೆಗೆ ಒಂದು ಬಲ್ಬನ್ನು ಕೆ.ಇ.ಬಿ. ಬೋರ್ಡಿನವರು ಕೊಡಬೇಕೆಂದು ಹೇಳಿದ್ದೇವೆ. ಅವನು ತೀರಾ ಬಡವನಾಗಿದ್ದರೆ ಮತ್ತೊಂದು ಬಲ್ಬನ್ನು ತಾಲ್ಲೂಕು ಬೋರ್ಡಿನಿಂದ ಕೊಡಿಸುವ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಇವತ್ತಿನ ದಿವಸ ಚಿಮಣಿ ಎಣ್ಣೆ ಸಿಗುವುದು ಬಹಳ ಕಷ್ಟವಾಗಿದೆ, ಸಿಕ್ಕಿದರೂ ಬಹಳ ಬೆಲೆಯಾಗಿದೆ. ಆದಕ್ಕಾಗಿ ನಾವು ನಲ್ ಆಗಿ ಒಂದು ತಿಂಗಳಿಗೆ ೫೦ ಪೈಸೆ ತೆಗೆದುಕೊಂಡರೆ ಸಾಕೆಂದು ಯೋಜನೆ ಮಾಡಿದ್ದೇವೆ. ಈ ರೀತಿಯಾಗಿ ಇಡೀ ದೇಶ ದಲ್ಲಿ ಯಾರೂ ಮಾಡದಂತಹ ಈ ಒಂದು ಯೋಜನೆಯನ್ನು ನಾವು ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ವರ್ಷದಿಂದಲೇ ಮಾಡಿ ತೋರಿಸುತ್ತಿದ್ದೇವೆ. ಇದು ನಮ್ಮ ಸರ್ಕಾರ ಗ್ರಾಮಾಂತರ ಪ್ರದೇಶಗಳಿಗಾಗಿ ಮಾಡುತ್ತಿರುವ ಒಂದು ಒಳ್ಳೆಯ ಯೋಜನೆ.

ಇನ್ನು ಮಾನ್ಯ ಸ್ನೇಹಿತರಾದ ಲಕ್ಷ್ಮೀಸಾಗರ್‌ರವರು ಕೆಲವು ಒಳ್ಳೆಯ ವಿಚಾರಗಳನ್ನು ಹೇಳಿದ್ದಾರೆ. ಆದರೆ ಮಾತು ಮಾತಿಗೆ ಗ್ರಾಮಾಂತರ ಪ್ರದೇಶಗಳಿಗೆ ಖರ್ಚು ಮಾಡುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ನಾವು ಯಾವ ಯೋಜನೆಗಳಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಖರ್ಚು ಮಾಡಿಲ್ಲ ಎಂಬುದನ್ನು ತಿಳಿಸಬೇಕು. ನಾವು ಡ್ರಾಫ್ಟ್ ಪ್ರೋಗ್ರಾಂನಲ್ಲಿ ಶೇಕಡ ೬೦ ರಷ್ಟು ಹಣವನ್ನು ಗ್ರಾಮಾಂತರ ಪ್ರದೇಶ ಗಳಿಗಾಗಿ ಖರ್ಚು ಮಾಡುತ್ತೇವೆಂದು ಹೇಳಿದ್ದೇವೆ. ಅದಕ್ಕೆ ಮಾನ್ಯ ಸದಸ್ಯರು ಹೇಳಿದರು, ಕೇಂದ್ರ ದವರು ಶೇಕಡ ೪೦ ರಷ್ಟು ಖರ್ಚು ಮಾಡಲಿಕ್ಕೆ ಹೊರಟಿರುವಾಗ ನೀವು ಅವರಿಗಿಂತ ಜೋರಾಗಿ ಶೇಕಡ ೬೦ ರಷ್ಟು ಖರ್ಚು ಮಾಡುವುದಾಗಿ ಹೇಳಿಬಿಟ್ಟಿದ್ದೀರಿ ಎಂದು. ನಾವು ಖಂಡಿತವಾಗಿ ಶೇ. ೬೨ ರಷ್ಟು ಖರ್ಚು ಮಾಡುತ್ತೇವೆ, ಮತ್ತು ಇನ್ನೂ ಹೆಚ್ಚಿಗೆ ಖರ್ಚು ಮಾಡುತ್ತೇವೆ. ಏತಕ್ಕೆಂದರೆ, ಎಂಪ್ಲಾಯ್ ಮೆಂಟ್ ಅಫರ್ಮೇಷನ್ ಸ್ಕೀಂ, ಭಾಗ್ಯಜ್ಯೋತಿ ಯೋಜನೆ, ಬಡವರಿಗೆ ಮನೆ ಕಟ್ಟಿಸಿಕೊಡುವುದು. ಇವೆಲ್ಲ ಗ್ರಾಮಾಂತರ ಪ್ರದೇಶದ ಜನತೆಗಾಗಿಯೇ ಮಾಡುವುದಾದ್ದರಿಂದ ಶೇಕಡ ೬೨ ರಷ್ಟು ಖರ್ಚು ಮಾಡುತ್ತೇವೆ. ಅದರಲ್ಲಿ ಎಜುಕೇಷನ್‌ಗೆ ಮತ್ತು ಎಲೆಕ್ಟ್ರಿಫಿಕೇಷನ್ ಹಾಗೂ ಇನ್ನೂ ಕೆಲವು ಭಾಗಗಳನ್ನು ಬಿಟ್ಟುಬಿಡಿ, ಕೇಂದ್ರದವರು ಅವನ್ನೆಲ್ಲ ತೆಗೆದುಕೊಂಡಿಲ್ಲವೆಂದು ಹೇಳಿದರು. ನಾವು ತೆಗೆದುಕೊಂಡು ಮಾಡುವಾಗ ಎಲೆಕ್ಟ್ರಿಸಿಟಿಯಿಂದ ಯಾವ ಗ್ರಾಮಗಳಿಗೆ ಲಾಭವಾಗುತ್ತದೋ ಅಂಥದನ್ನು ಶೇಕಡ ೨೫ ರಷ್ಟು ಮಾತ್ರ ತೆಗೆದುಕೊಂಡಿದ್ದೇವೆ, ಎಲ್ಲವನ್ನು ತೆಗೆದುಕೊಂಡಿಲ್ಲ. ಜೊತೆಗೆ ಇರಿಗೇಷನ್ ಕೂಡ ಗ್ರಾಮದ ಅಭಿವೃದ್ಧಿಗೆ ಸಂಬಂಧಪಟ್ಟ ಕಾರ್ಯವಾಗಿದೆ. ಅದಕ್ಕಾಗಿ ನಾವು ಕೋಟ್ಯಂತರ ರೂಪಾಯಿ ಗಳನ್ನು ಖರ್ಚು ಮಾಡುತ್ತಿದ್ದೇವೆ. ಇರಿಗೇಷನ್ ರಾಜ್ಯಕ್ಕೆ ಸಂಬಂಧಪಟ್ಟ ವಿಷಯವಾದ್ದರಿಂದ ಅದಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಅದು ರೈತರಿಗೆ ಪ್ರಯೋಜನವಾಗತಕ್ಕ ಒಂದು ದೊಡ್ಡ ಕಾರ್ಯ. ಇರಿಗೇಷನ್ ಮತ್ತು ಎಲ್ಲ ಯೋಜನೆಗಳನ್ನು ತೆಗೆದುಕೊಂಡರೆ ನಾವು ಗ್ರಾಮದ ಅಭಿವೃದ್ಧಿ ಗಾಗಿ ಶೇಕಡ ೬೦ ರಷ್ಟು ಖರ್ಚು ಮಾಡುತ್ತಿದ್ದೇವೆ, ಮತ್ತು ಇನ್ನೂ ಹೆಚ್ಚಿಗೆ ಮಾಡುತ್ತೇವೆಂದು ಹೇಳು ವುದಕ್ಕೆ ಬಯಸುತ್ತೇನೆ. ಅದೇ ರೀತಿ, ಈ ಸಾರಿ ಹಿಂದುಳಿದ ಪ್ರದೇಶದ ಅಭಿವೃದ್ಧಿ ಅಂದರೆ ಕಾರವಾರ ಬಂದರನ್ನು 'ಆಲ್ ವೆದರ್' ಬಂದರನ್ನಾಗಿ ಮಾಡುವ ಯೋಜನೆಯನ್ನು ಕೈಗೊಂಡಿದ್ದೇವೆ. ಅದು ಬಹಳ ವರ್ಷದ ಹಿಂದೆಯೇ ಆಗಬೇಕಿತ್ತು. ಹೊಸಪೇಟೆಯಿಂದ ಬರುತ್ತಿದ್ದ ಕಬ್ಬಿಣದ ಅದುರೆಲ್ಲ ಮದ್ರಾಸ್ ಹಾರ್ಬರ್‌ಗೆ ಹೋಗುತ್ತಿತ್ತು, ಈಗಲೂ ಹೋಗುತ್ತಿದೆ. ನಾವು ಕಾರವಾರ ಪೋರ್ಟನ್ನು ಚನ್ನಾಗಿ ಅಭಿವೃದ್ಧಿ ಮಾಡಿದರೆ ಅಲ್ಲಿ ಬೇಕಾದಷ್ಟು ಎಕನಾಮಿಕ್ ಆಕ್ಟಿವಿಟೀಸ್ ಆಗುವುದಕ್ಕೆ ಸಾಧ್ಯತೆ ಇದೆ. ಇಡೀ ಹಿಂದುಳಿದ ಪ್ರದೇಶವೆಲ್ಲ ಮುಂದೆ ಬರಲಿಕ್ಕೆ ಸಾಧ್ಯತೆ ಇದೆ. ಅದಕ್ಕಾಗಿ ಸರ್ಕಾರ ಮುಂದೆ ಬಂದು ೬ ಕೋಟಿ ರೂಪಾಯಿಗಳ ಯೋಜನೆಯೊಂದನ್ನು ಸಿದ್ಧಗೊಳಿಸಿ ಈ ವರ್ಷ ಒಂದು ಕೋಟಿ ರೂಪಾಯಿ ಗಳನ್ನು ಖರ್ಚು ಮಾಡಬೇಕೆಂದಿದ್ದೇವೆ. ಆ ಬಂದರಿನ ಕೆಲಸವನ್ನು ಈಗಾಗಲೇ ಪ್ರಾರಂಭ ಮಾಡ ಬೇಕೆಂದಿದ್ದೇವೆ. ಈ ಕಾರವಾರ ಬಂದರಿನ ಅಭಿವೃದ್ಧಿಯಿಂದ ಇಡೀ ಬಾಂಬೆ-ಕರ್ನಾಟಕದ ಎಲ್ಲ ಭಾಗ ಗಳಿಗೂ ಅನುಕೂಲವಾಗುತ್ತದೆ. ನಂತರ ಅದಕ್ಕೆ ಒಂದು ರೈಲ್ವೆ ಲಿಂಕ್ ಬಂದರೆ ನಮ್ಮ ಭಾಗದ ಎಕನಾಮಿಕ್ ಆಕ್ಟಿವಿಟೀಸ್‌ಗೆ ಬಹಳಷ್ಟು ಹಣ ಟ್ಯಾಕ್ಸ್ ರೂಪದಲ್ಲಿ ದೊರೆಯುವುದರ ಜೊತೆಗೆ ಬಡವರಿಗೆ ಕೆಲಸ ದೊರಕುವ ರೂಪದಲ್ಲಿ ಅವರಿಗೂ ಸಹಾಯಕವಾಗುವ ಸಾಧ್ಯತೆ ಇದೆ. ೬ ಕೋಟಿ ರೂಪಾಯಿ ಗಳನ್ನು ಈ ಯೋಜನೆಗಾಗಿ ಒದಗಿಸಿಕೊಡಿ ಎಂದು ಕೇಳಿಕೊಂಡಿದ್ದೇವೆ. ಬಹಳ ವರ್ಷಗಳಿಂದಲೂ ಕೇಳುತ್ತಿದ್ದೆವೆ. ಅದನ್ನು ಒದಗಿಸಿಕೊಟ್ಟು ಆ ಕಾರ್ಯ ಯಶಸ್ವಿಯಾಗಿ ಮಾಡತಕ್ಕ ಜವಾಬ್ದಾರಿ ಅವರದ್ದು. ಈಗ ನಾವು ಇನಿಷಿಯೇಟ್ ತೆಗೆದುಕೊಂಡಿದ್ದೇವೆ. ಆದ್ದರಿಂದ ಈಗಲಾದರೂ ಹಣ ಕೊಡಿ, ಇನ್ನೂ

ಹೆಚ್ಚು ಕಾರ್ಯ ಮಾಡಬೇಕೆಂದಿದ್ದೇವೆಂದು ಪುನಃ ಹೇಳಿಕೊಳ್ಳುತ್ತೇವೆ. ಈಗ ಹಾಕಿರತಕ್ಕ ೬ ಕೋಟಿ ರೂಪಾಯಿ ಯೋಜನೆಯನ್ನು ಇನ್ನೂ ಹೆಚ್ಚು ದೊಡ್ಡದಾಗಿ ಮಾಡಬೇಕಾಗಿದೆ. ಪ್ರಾರಂಭ ಮಾಡಿದಾಗ ಮೊದಲ ಹಂತಕ್ಕೆ ೬ ಕೋಟಿ ರೂಪಾಯಿಗಳನ್ನು ನಂತರ ೧೦ ಕೋಟಿ ರೂಪಾಯಿಗಳನ್ನು ಹೀಗೆ ೧೬ ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡುವ ಕಾರ್ಯವನ್ನು ಸಹ ಸರ್ಕಾರ ಇಟ್ಟುಕೊಂಡಿದೆ. ಕೇಂದ್ರ ಸರ್ಕಾರ ಖಂಡಿತ ಮುಂದೆ ಬಂದು ಇದಕ್ಕೆ ಧನಸಹಾಯ ಮಾಡುತ್ತದೆಂದು ನನಗೆ ನಂಬಿಕೆ ಇದೆ. ಯಾವಾಗಲು ನಾವು ಮೊದಲು ಇನಿಷಿಯೇಟ್ ತೆಗೆದುಕೊಂಡರೆ ಕೇಂದ್ರ ಸರ್ಕಾರ ಮುಂದೆ ಬಂದು ಹಣ ಕೊಡ ಬಹುದೆಂಬ ನಂಬಿಕೆ ಇದೆ. ಇನ್ನು ೩-೪ ವರ್ಷಗಳಲ್ಲಿ ಸೀ ಎರೋಷನ್ ಅನ್ನು ತಡೆಗಟ್ಟಿ ಅಲ್ಲಿರುವ ಜನರ ಭೂಮಿಗೆ ರಕ್ಷಣೆ ಕೊಡಬೇಕೆಂಬ ಉದ್ದೇಶವನ್ನು ಸರ್ಕಾರ ಹೊಂದಿದೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಬಡ ಜನರಿಗೆ ಮನೆಗಳನ್ನು ಕಟ್ಟಿಸಿಕೊಡುವಂತಹ ಕಾರ್ಯವನ್ನು ಹೆಚ್ಚಿನ ರೀತಿಯಲ್ಲಿ ಮಾಡಬೇಕೆಂದಿದ್ದೇವೆ. ಕಳೆದ ಸಾರಿ ಈ ಬಾಬಿಗಾಗಿ ೧೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಸಾರಿ ೨೦ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಬಡವರ ಗೃಹಗಳಿಗಾಗಿ ಖರ್ಚು ಮಾಡಲಿದ್ದೇವೆ. ಬಡವರು ಬರೀ ಗ್ರಾಮಾಂತರ ಪ್ರದೇಶಗಳಲ್ಲಿ ಮಾತ್ರವಲ್ಲ, ನಮ್ಮ ಮುನಿಸಿಪಲ್ ಏರಿಯಾದಲ್ಲೂ ಕೂಡ ಬಹಳಷ್ಟು ಮಂದಿ ಬಡವರಿದ್ದಾರೆಂಬ ಒಂದು ವಾದ ಒಪ್ಪುವಂಥಾದ್ದು. ಅವರಿಗೂ ಕೂಡ ಗೃಹಗಳನ್ನು ಮಾಡಿ ಕೊಡಬೇಕೆಂದು ಸರ್ಕಾರ ಯೋಚನೆ ಮಾಡಿ ಈ ವರ್ಷದಿಂದಲೇ 'ಅರ್ಬನ್ ಪೂರ್' ಯಾರಿದ್ದಾರೆ ಅವರಿಗಾಗಿ ಒಂದು ಹೊಸ ಯೋಜನೆಯನ್ನು ಮಾಡಬೇಕೆಂದಿದ್ದೇವೆ. ಆ ಯೋಜನೆಗೆ "ಭಾಗ್ಯ ಮಂದಿರ ಯೋಜನೆ" ಎಂದು ಕರೆಯಬೇಕೆಂದಿದ್ದೇವೆ ಮತ್ತು ಅದಕ್ಕಾಗಿ ಈ ವರ್ಷ ಪ್ರಾರಂಭದಲ್ಲೇ ೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅರ್ಬನ್ ಪೂರ್‌ಗೆ ಸಹಾಯಕವಾಗುವ ರೀತಿಯಲ್ಲಿ ಕೆಲಸ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಅದೇ ರೀತಿ ಈ ಸಲದ ಆಯವ್ಯಯದಲ್ಲಿ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಲಾಗಿದೆ. ಅವರಲ್ಲಿ ಆಕ್ಟ್ರಾಯ್‌ನ್ನು ರದ್ದು ಮಾಡಿರುವುದು ಬಹಳ ಮುಖ್ಯವಾದುದು. ಇದಕ್ಕೆ ಎಲ್ಲ ಸದಸ್ಯರೂ ಬೆಂಬಲ ಕೊಟ್ಟಿದ್ದಾರೆ. ಅಲ್ಲದೆ, ಸಾಮಾನ್ಯ ಜನರೂ, ವರ್ತಕರೂ ಮತ್ತು ಕೈಗಾರಿಕೋದ್ಯಮಿಗಳು ಆಕ್ಟ್ರಾಯ್ ರದ್ದು ಮಾಡಿದ್ದು ಒಳ್ಳೆಯದೆಂದು ಸಾವಿರಾರು ಕಾಗದ ಮತ್ತು ತಂತಿಗಳನ್ನು ನನಗೂ ಮತ್ತು ಸರ್ಕಾರಕ್ಕೂ ಬರೆದಿದ್ದಾರೆ. ಕರ್ನಾಟಕದವರು ಮಾತ್ರವಲ್ಲ, ಇತರ ರಾಜ್ಯಗಳವರೂ ಸಹ, ಆಕ್ಟ್ರಾಯ್ ರದ್ದು ಮಾಡುವಲ್ಲಿ ಸರ್ಕಾರ ಅನುಸರಿಸಿದ ಮಾರ್ಗಗಳೇನು, ಇದರ ಫೈನಾನ್ಷಿಯಲ್ ಇಂಪ್ಲಿಕೇಷನ್ ಹೇಗೆ ಮತ್ತು ಇದನ್ನು ಹೇಗೆ ಕವರ್ ಅಪ್ ಮಾಡಲಾಗುವುದೆಂದು ನಮ್ಮನ್ನು ಕೇಳಿದ್ದಾರೆ. ಅಹಮದಾಬಾದ್ ನಗರದ ಮೇಯರ್ ಅವರು ಒಳ್ಳೆಯ ಕೆಲಸ ಮಾಡಿದ್ದೀರಿ. ಅದನ್ನು ಹೇಗೆ ಮಾಡಿದ್ದೀರೆಂದು ನನಗೆ ತಿಳಿಸಿರೆಂದು ನಮ್ಮ ಸರ್ಕಾರವನ್ನು ಕೇಳಿದ್ದಾರೆ. ಆಕ್ಟ್ರಾಯ್ ರದ್ದು ಮಾಡಿರುವುದರಿಂದ, ತೊಂದರೆಗೊಳಗಾಗಿದ್ದವರಿಗೆ ಸ್ವಲ್ಪ ರಿಲೀಫ್ ಮಾಡಿದಂತಾಗಿ ಕಾಣುತ್ತದೆ. ಅದಕ್ಕಾಗಿಯೇ ಕರ್ನಾಟಕದ ಹೊರಗಡೆ ಇರುವವರೂ ಸಹ ಆಕ್ಟ್ರಾಯ್ ರದ್ದತಿಗೆ ಬೆಂಬಲ ಕೊಟ್ಟಿರುವುದು. ಆಕ್ಟ್ರಾಯ್ ರದ್ದತಿಯಿಂದ ಸರ್ಕಾರಕ್ಕೆ ೨೦ ಕೋಟಿ ರೂಪಾಯಿಗಳಷ್ಟು ನಷ್ಟವಾಗಬಹುದು. ಈ ನಷ್ಟವನ್ನು ಸರಿದೂಗಿಸಲು ಮಾರಾಟ ತೆರಿಗೆ ಮೇಲೆ ಶೇಕಡ ೧೦ ರಷ್ಟು ಸರ್‌ಚಾರ್ಜ್ ಹಾಕಿದರೆ ಅದರಿಂದ ೧೦ ಕೋಟಿ ರೂಪಾಯಿಗಳು ಸಿಕ್ಕಬಹುದು ಮತ್ತೆ ಉಳಿದ ೧೦ ಕೋಟಿ ರೂಪಾಯಿಗಳು ಕೇಂದ್ರದಿಂದ ಬರುತ್ತದೆನ್ನುವ ನಂಬಿಕೆಯಿದೆ. ನಾವು ಇಷ್ಟೊಂದು ಧೈರ್ಯದಿಂದ ಆಕ್ಟ್ರಾಯ್‌ನ್ನು ರದ್ದು ಮಾಡಿರುವುದರಿಂದ ಕೇಂದ್ರದವರು ನಮ್ಮ ಕೈ ಬಿಡುವುದಿಲ್ಲ, ಈ ಬಗ್ಗೆ ಕೇಂದ್ರದವರು ಈ ವಾರದಲ್ಲಿ ಯಾವುದಾದರೊಂದು ತೀರ್ಮಾನ ತೆಗೆದುಕೊಳ್ಳುವರೆಂದು ನನಗೆ ತಿಳಿದು ಬಂದಿದೆ. ಕೇಂದ್ರದವರು ಮೊದಲಿನಿಂದಲೂ ಆಕ್ಟ್ರಾಯ್‌ನ್ನು ರದ್ದು ಮಾಡಿದರೆ ಸಹಾಯ ಮಾಡುವುದಾಗಿ ಹೇಳುತ್ತಿದ್ದರು. ಈ ಒಂದು ಒಳ್ಳೆಯ ಕಾರ್ಯದಲ್ಲಿ ಅವರೂ ಭಾಗಿಯಾಗಿ, ಇದರ ಫಲ ಅವರಿಗೂ ಸೇರಲಿ ಎನ್ನುವುದು ನನ್ನ ಆಸೆ. ಅವರು ಖಂಡಿತವಾಗಿ ಸಹಾಯ ಮಾಡುತ್ತಾರೆನ್ನುವ ನಂಬಿಕೆ ನನಗಿದೆ.

೧-೦೦ ಪಿ. ಎಂ.

ತೆರಿಗೆ ವಿನಾಯಿತಿ ನೀಡುವುದು ಸಬ್ಜೆಕ್ಟೀವ್ ಆಧಾರದ ಮೇಲೆ, ಆಬ್ಜೆಕ್ಟೀವ್ ಆಗಿರಬೇಕೆನ್ನುವ ಉದ್ದೇಶದಿಂದ ಚಲನ ಚಿತ್ರಗಳನ್ನು ಹೊಸದಾಗಿ ಕ್ಲಾಸಿಫಿಕೇಷನ್ ಮಾಡಿ ಇದುವರೆವಿಗೂ ಯಾರೂ ಹಾಕದಂಥ ಹೊಸ ನೀತಿಯನ್ನು ನಾವು ಈ ರಾಜ್ಯದಲ್ಲಿ ಈ ಸಲದಿಂದ ಹಾಕಿದ್ದೇವೆ. "ಎ" ಕ್ಲಾಸಿಫಿಕೇಷನ್

ಇರುವ ಚಲನಚಿತ್ರಗಳಿಗೆ ಹೆಚ್ಚು ತೆರಿಗೆಯನ್ನು ವಿಧಿಸಲಾಗಿದೆ. ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರದರ್ಶಿತವಾಗುವ ಕನ್ನಡ ಚಲನಚಿತ್ರಗಳಿಗೆ ಶೇಕಡ ೫೦ ರಷ್ಟು ತೆರಿಗೆಯನ್ನು ಕಡಿಮೆ ಮಾಡಲಾಗಿದೆ. ಇದರಿಂದ ೨೦ ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರದರ್ಶಿತವಾಗುವ ಕನ್ನಡ ಚಲನಚಿತ್ರಗಳಿಗೆ ಶೇಕಡ ೫೦ ರಷ್ಟು ತೆರಿಗೆ ವಿನಾಯಿತಿಯ ಜೊತೆಗೆ ಅಲ್ಲಿನ ಜನರೂ ಸಹ ಕಡಿಮೆ ಹಣ ಕೊಟ್ಟು ಸಿನಿಮಾ ನೋಡುವುದಕ್ಕೆ ಸಹಾಯಕವಾಗುತ್ತದೆ. ಈ ಹೊಸ ನೀತಿಯಿಂದ ಕನ್ನಡ ಚಲನ ಚಿತ್ರ ಉದ್ದಿಮೆ ಮೇಲೆ ಬರಲಿಕ್ಕೆ ಸಾಧ್ಯವಾಗುವುದಲ್ಲದೆ, ಕನ್ನಡ ಚಲ ಚಿತ್ರ ಪ್ರದರ್ಶಕರಿಗೂ ಬಹಳ ಪ್ರಯೋಜನವಾಗುತ್ತದೆ. ಇದೊಂದು ದೊಡ್ಡ ನೀತಿ. ಇದರಿಂದ ಕನ್ನಡ ಚಲನಚಿತ್ರಗಳನ್ನು ಹೆಚ್ಚು ಹೆಚ್ಚಾಗಿ ತೆಗೆಯಲಿಕ್ಕೆ ಸಾಧ್ಯವಾಗುತ್ತದೆ, ಮತ್ತು ಕನ್ನಡ ಚಲನಚಿತ್ರ ಉದ್ದಿಮೆಗೆ ಇದೊಂದು ದೊಡ್ಡ ಪ್ರೋತ್ಸಾಹವಾಗುತ್ತದೆ. ಸೆಕ್ಸ್ ಮತ್ತು ಹಿಂಸೆ ಇರುವ ಚಲನಚಿತ್ರಗಳನ್ನು "ಎ" ಚಿತ್ರಗಳೆಂದು ವರ್ಗೀಕರಿಸಲಾಗುತ್ತಿದೆ.

The determining authority is the Censor Board, which is an all-India Body. We have to accept whatever they say. That is the most objective way. We have been giving exemptions according to our whims and fancies. So, such films should be discouraged. We have doubled the tax for 'A' films. Whether the film is 'A' or 'U' would be determined by the Censor Board, an all India Body which is a respectable body and nobody questions its authority. It is for the Censor Board to say whether there is more sex or less sex and so on and so forth in a film. This is a fundamental change in our film policy. On the one hand we would like to encourage more and more Kannada films and provide benefits to the rural areas in Karnataka, and on the other we would like to discourage films of 'A' category where there is violence and sex. This is our policy. We would like to bring some amendments to the Entertainment Tax Act also in this respect. But if the tickets are heavy, Government will certainly consider in the case of 'A' films also, and if necessary bring in certain amendments to the Entertainment Tax Act.

ಮಾನ್ಯ ಬೊಮ್ಮಾಯಿಯವರು ಅನೇಕ ವಿಚಾರಗಳನ್ನು ಹೇಳಿದ್ದಾರೆ, ಉತ್ತಮ ಸಲಹೆಗಳನ್ನೂ ಕೊಟ್ಟಿದ್ದಾರೆ. ಕಡೆಗವರು ಇಷ್ಯೂಸ್ ಬಿಟ್ಟು ನಾನ್ ಇಷ್ಯೂಸ್ ಕುರಿತು ಮಾತನಾಡುತ್ತಾ, ಕರ್ನಾಟಕದಲ್ಲಿ ಒನ್ ಮ್ಯಾನ್ ಕ್ಯಾಬಿನೆಟ್ ಇದೆ ಎಂದು ಹೇಳಿದ್ದಾರೆ. ಸದ್ಯ, ಅವರು ನೋ ಮ್ಯಾನ್ ಕ್ಯಾಬಿನೆಟ್ ಇದೆ ಎಂದು ಹೇಳಲಿಲ್ಲವಲ್ಲ! ಈ ದೇಶದ ಎಲ್ಲ ರಾಜ್ಯಗಳನ್ನು ತೆಗೆದುಕೊಂಡರೆ, ಹೆಚ್ಚು ಅನುಭವಿಶಾಲಿ ಮುಖ್ಯ ಮಂತ್ರಿಗಳಿರುವುದು ಒಬ್ಬರೇ ಒಬ್ಬರೆಂದರೆ — ಅವರು ಕರ್ನಾಟಕದ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ಅವರು.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಹೇಳಬೇಕಷ್ಟೆ.

ಶ್ರೀ ಎಸ್. ಎಂ. ಯಾಹ್ಯಾ.—ಇದನ್ನು ನಾನು ಹೇಳುತ್ತಿರುವುದಲ್ಲ. ದೆಹಲಿಯಲ್ಲಿರುವ ಮಾನ್ಯ ಬೊಮ್ಮಾಯಿಯವರ ದೊಡ್ಡ ದೊಡ್ಡ ನಾಯಕರುಗಳೇ ಇದನ್ನು ಒಪ್ಪಿಕೊಳ್ಳುತ್ತಿದ್ದಾರೆ. ಎಸ್. ಡಿ. ಸಿ. ಸಭೆಯಲ್ಲೂ ಮತ್ತು ಜೋನಲ್ ಕೌನ್ಸಿಲ್ ಸಭೆಯಲ್ಲೂ ಈ ಮಾತು ಕೇಳಿಬರುತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಹೆಚ್ಚು ಅನುಭವಿಗಳು. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ.

ಶ್ರೀ ಎಸ್. ಎಂ. ಯಾಹ್ಯಾ.—ಅವರ ಅನುಭವದಿಂದ ಕರ್ನಾಟಕಕ್ಕೆ ಒಂದು ಭದ್ರವಾದ ಸರ್ಕಾರವನ್ನು ಒದಗಿಸಿದ್ದಾರೆ. ಮಾನ್ಯ ಬೊಮ್ಮಾಯಿಯವರು ಒನ್ ಮ್ಯಾನ್ ಕ್ಯಾಬಿನೆಟ್ ಎಂದು ಕಳೆದ ವರ್ಷ ಕೂಡ ಹೇಳಿದ್ದರು; ಈ ವರ್ಷವೂ ಕೂಡ ಹೇಳಿದ್ದಾರೆ. ಇದೆಲ್ಲಾ ನಾನ್ ಇಸ್ಯೂ, ಇವೆಲ್ಲಾ ಏತಕ್ಕೆ ಹೇಳ

